ಸಂಪುಟ: 01 ಸಂಚಿಕೆ: 80 ಪುಟ: 04 ಬೆಲೆ: 02 ಗುರುವಾರ ಸೆಪ್ಟಂಬರ್ 03 2026 ಮೊ: 7411699198/7406928404

# ಅಜಾತ ಶತ್ರು

ಜನರ ನುಡಿ.... ಕೊಪ್ಪಳದಿಂದ ಏಕಕಾಲಕ್ಕೆ ಪ್ರಕಟ ಸತ್ಯದ ಧ್ವನಿ...

ಕನ್ನಡ ದಿನ ಪತ್ರಿಕೆ

ಪ್ರದೀಪಕುಮಾರ
ಸಂಪಾದಕರು




Volume:01 Issue: 80 Pages:04 Price:02 THURSDAY SEPTEMBER 03 2026 RNI NO: KNKAN/26/A4008 E-mail:ajathashathru2026@gmail.com

## ಸತ್ಯವಾಣಿ ಕಟೋಕ್ತಿ



ಎಲ್ಲದರಿಂದ ಎಷ್ಟು ಮುಕ್ತವಾಗುತ್ತಿಯೋ ಅಷ್ಟು ಬೇಗ ಶುದ್ಧವಾಗಿ ಅನಂತವಾಗುವೆ

ವಾಣಿ ಭಂಡಾರಿ.

# ಗರ್ಭಿಣಿಯರ ಆರೋಗ್ಯ ತಪಾಸಣೆ, ನೋಂದಣಿ ಕಡ್ಡಾಯ



ಅ.ಶ. ಸುದ್ದಿ ವಿಜಯಪುರ

ವಿಜಯಪುರ : ಜಿಲ್ಲೆಯಲ್ಲಿರುವ ಎಲ್ಲ ಗರ್ಭಿಣಿಯರ ಮಾಹಿತಿಯನ್ನು ಆರ್.ಸಿ.ಹೆಚ್ ತಂತ್ರಾಂಶದಲ್ಲಿ ಕಡ್ಡಾಯವಾಗಿ ನಿಗದಿತ ಸಮಯದಲ್ಲಿ ನೋಂದಣಿ ಮಾಡಬೇಕು ಹಾಗೂ ನಿಯಮಿತವಾಗಿ ಆರೋಗ್ಯ ತಪಾಸಣೆ ಕೈಗೊಳ್ಳಬೇಕು ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಿಷಿ ಆನಂದ ಅವರು ಹೇಳಿದರು.

ನಗರದ ಜಿಲ್ಲಾ ಪಂಚಾಯತ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲಾ ಆರೋಗ್ಯ ಸಂಘದ ಕಾರ್ಯಕಾರಿಣಿ ಸಭೆಯಲ್ಲಿ ಆರೋಗ್ಯ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆ ನಡೆಸಿ ಅವರು ಮಾತನಾಡಿದರು, ಎಲ್ಲ ತಾಲೂಕಾ ಆರೋಗ್ಯ ಅಧಿಕಾರಿಗಳು ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳಲ್ಲಿ ಕಡಿಮೆ ಪ್ರಗತಿ ಸಾಧಿಸಿರುವ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರಿಗೆ ಸಭೆಯನ್ನು ಕರೆದು ಹೆಚ್ಚಿನ ಪ್ರಗತಿ ಸಾಧಿಸಲು ಕ್ರಮವಹಿಸಬೇಕು ಎಂದರು.

ಆರ್.ಬಿ.ಎಸ್.ಕೆ ತಂಡದಿಂದ ಅಂಗನವಾಡಿ ಕೇಂದ್ರ ಹಾಗೂ ಶಾಲೆಯ ಮಕ್ಕಳ ಆರೋಗ್ಯ ತಪಾಸಣೆಯಲ್ಲಿ ನ್ಯೂನ್ಯತೆ ಕಂಡುಬಂದ ಮಕ್ಕಳು ಹಾಗೂ ಮೇಲ್ಮಟ್ಟದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಮಕ್ಕಳ ಮಾಹಿತಿಯನ್ನು ನೀಡಲು ತಿಳಿಸಿದರು. 2026-27 ನೇ ಸಾಲಿನಲ್ಲಿ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಜಿಲ್ಲಾ ಮಟ್ಟದಲ್ಲಿ ಮಾಹಿತಿ ಶಿಕ್ಷಣ ಮತ್ತು ಸಂವಹನ ಮೂಲಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಕ್ರಿಯಾ ಯೋಜನೆಯಲ್ಲಿಯ ಕಾರ್ಯಕ್ರಮಗಳನ್ನು ಜಿಲ್ಲೆಯಲ್ಲಿ ನಿಯಮಾನುಸಾರ ಅನು?ನಗೊಳಿಸಬೇಕು. ಆಯ್ದ ಸ್ಥಳಗಳಲ್ಲಿ ಆರೋಗ್ಯ ಇಲಾಖೆಯ ಕಾರ್ಯಕ್ರಮದ ಬಗ್ಗೆ ಹೊರ್ಡಿಂಗ್ಸ್ ಅಳವಡಿಸಿ ಸಾರ್ವಜನಿಕರಿಗೆ ಜಾಗೃತಿ ಮೂಡಿಸಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಾದ ಡಾ. ಎಂ. ಬಿ. ಬಿರಾದಾರ, ಜಿಲ್ಲಾ ಶಸ್ತ್ರಚಿಕಿತ್ಸಕರಾದ ಡಾ. ಶಿವಾನಂದ ಮಾಸ್ತಿಹೊಳ್ಳಿ, ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳಾದ ಡಾ. ಪರಶುರಾಮ ಹಿಟ್ನಳ್ಳಿ, ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿಗಳಾದ ಡಾ. ರಾಜೇಶ್ವರಿ ಗೊಲಗೇರಿ, ಜಿಲ್ಲಾ ಕ್ಷಷ್ಠರೋಗ ನಿರ್ಮೂಲನಾ ಅಧಿಕಾರಿಗಳಾದ ಡಾ. ಅರ್ಚನಾ ಕುಲಕರ್ಣಿ, ಜಿಲ್ಲಾ ಮಲೇರಿಯಾ ಅಧಿಕಾರಿಗಳಾದ ಡಾ. ಜಾನ್ ಕಟವಟೆ, ಜಿಲ್ಲೆಯ ಎಲ್ಲಾ ತಾಲೂಕಾ ಆರೋಗ್ಯಾಧಿಕಾರಿಗಳು, ಜಿಲ್ಲಾ ಮಟ್ಟದ ಆಯುಷ್‌ಅಧಿಕಾರಿಗಳು ಹಾಗೂ ಆರೋಗ್ಯ ಇಲಾಖೆಯ ಸಿಬ್ಬಂದಿ ಭಾಗವಹಿಸಿದ್ದರು.

# ಅಭಿವೃದ್ಧಿಯೇ ನಮ್ಮ ಗುರಿ: ರಾಯರಡ್ಡಿ

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ಉನ್ನತ ಶಿಕ್ಷಣ ಸಚಿವರಾದ ಬಸವರಾಜ ರಾಯರಡ್ಡಿ ಅವರು ಸೆಪ್ಟೆಂಬರ್ 2ರಂದು ಯಲಬುರ್ಗಾ ವಿಧಾನಸಭಾ ಕ್ಷೇತ್ರದ ಚಿಕ್ಕಮ್ಯಾಗೇರಿ, ಕಲ್ಲೂರು ಹಾಗೂ ಸಂಗನಾಳ ಮತ್ತು ರಾಜೂರು ಗ್ರಾಮಗಳಲ್ಲಿ ಸಂಚರಿಸಿ ಜನಸಂದರ್ಶನ ಕಾರ್ಯಕ್ರಮ ನಡೆಸಿದರು.**

ಕೊಪ್ಪಳ ಜಿಲ್ಲಾಡಳಿತ, ಯಲಬುರ್ಗಾ ಹಾಗೂ ಕುಕನೂರು ತಾಲ್ಲೂಕು ಪಂಚಾಯಿತಿಯಿಂದ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಸಚಿವರು, ಜನರ ಕಲ್ಯಾಣ ಮತ್ತು ಯಲಬುರ್ಗಾ ಕ್ಷೇತ್ರದ ಸಮಗ್ರ ಅಭಿವೃದ್ಧಿಯೇ ನಮ್ಮ ಗುರಿಯಾಗಿದೆ ಎಂದು ಅವರು ಹೇಳಿದರು.

ನಮ್ಮ ಕ್ಷೇತ್ರದಲ್ಲಿ ಈ ಹಿಂದೆ 24 ಕೆರೆಗಳನ್ನು ತುಂಬಿಸಲಾಗಿತ್ತು. ಪ್ರಸ್ತುತ ರೂ. 970 ಕೋಟಿ ವೆಚ್ಚದಲ್ಲಿ ಕೃಷ್ಣಾ ನದಿಯಿಂದ ಯಲಬುರ್ಗಾ-ಕುಕನೂರು ಭಾಗದಲ್ಲಿನ 34 ಕೆರೆಗಳನ್ನು ತುಂಬಿಸುವ ಯೋಜನೆಗೆ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ಶೀಘ್ರದಲ್ಲೇ ಕಾಮಗಾರಿ ಆರಂಭವಾಗಲಿದೆ. ಎರೆ ಭಾಗದ ಸುಮಾರು 23 ಹಳ್ಳಿಗಳಿಗೆ ಶುದ್ಧ ಕುಡಿಯುವ ನೀರು ಒದಗಿಸಲು

> 'ಯಲಬುರ್ಗಾ ತಾಲ್ಲೂಕಿಗೆ 13ಕ್ಕೂ ಹೆಚ್ಚು ಕರ್ನಾಟಕ ಪಬ್ಲಿಕ್ ಶಾಲೆಗಳು (ಕೆಪಿ-ಎಸ್) ಮಂಜೂರಾಗಿದ್ದು, ಪ್ರತಿ ಶಾಲೆಗೆ ರೂ. 4 ಕೋಟಿ ವೆಚ್ಚದಲ್ಲಿ ಕಟ್ಟಡ ನಿರ್ಮಾಣವಾಗುತ್ತಿದೆ. **ರೂಪಿಸಲಾಗಿದೆ"**




ರೂ. 125 ಕೋಟಿ ವೆಚ್ಚದ ಯೋಜನೆ ರೂಪಿಸಲಾಗಿದೆ. ತುಂಗಭದ್ರಾ ನದಿಯಿಂದ ಡಿಬಿಒಟಿ ಮೂಲಕ ನೀರು ಒದಗಿಸುವ ಪ್ರಕ್ರಿಯೆಗೆ ಚಾಲನೆ ನೀಡಲಾಗಿದೆ. ಕ್ಷೇತ್ರದ ರಸ್ತೆಗಳ ಸುಧಾರಣೆಗೆ ಆದ್ಯತೆ ನೀಡಲಾಗಿದ್ದು,

> "ಪ್ರಸ್ತುತ ರಾಜ್ಯದಲ್ಲಿ ಎದುರಾಗಿರುವ ಭೀಕರ ಬರಗಾಲದ ಹಿನ್ನೆಲೆಯಲ್ಲಿ ಈಗಾಗಲೇ ಗಂಗಾವತಿ, ಕುಕನೂರು, ಕನಕಗಿರಿ ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿದೆ.

ಮುಂಡರಗಿ-ರಾಜೂರು-ಯಲಬುರ್ಗಾ ಸಂಪರ್ಕ ರಸ್ತೆಗಳ ಡಾಂಬರೀಕರಣ ಹಾಗೂ ದುರಸ್ತಿ ಕಾಮಗಾರಿಗಳು ಅಕ್ಟೋಬರ್‌ನಿಂದ ಚುರುಕುಗೊಳ್ಳಲಿವೆ. ಸಂಕನೂರು, ಮುಧೋಳ, ಯಲಬುರ್ಗಾ ಮಾರ್ಗದ ರಸ್ತೆಗಾಗಿ ರೂ. 400 ಕೋಟಿ ಅನುದಾನ ಮೀಸಲಿಡಲಾಗಿದೆ ಎಂದರು.

2ನೇ ಪುಟಕ್ಕೆ

# KPSC ನೇಮಕಾತಿ ಅಕ್ರಮ ಆರೋಪ



ಅ.ಶ. ಸುದ್ದಿ ಕೊಪ್ಪಳ

**ಕನಕಗಿರಿ, ಸೆ.2: ಕರ್ನಾಟಕ ಲೋಕಸೇವಾ ಆಯೋಗದ (KPSC) ನೇಮಕಾತಿ ಪ್ರಕ್ರಿಯೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮ ಹಾಗೂ ಅವ್ಯವಹಾರಗಳ ಕುರಿತು ನಿಷ್ಪಕ್ಷಪಾತ ತನಿಖೆ ನಡೆಸಿ, ಅನ್ಯಾಯಕ್ಕೊಳಗಾದ ಅರ್ಹ ಅಭ್ಯರ್ಥಿಗಳಿಗೆ ನ್ಯಾಯ ಒದಗಿಸಬೇಕು ಎಂದು ಭಾರತ ವಿದ್ಯಾರ್ಥಿ ಫೆಡರೇಷನ್ (SFI) ಹಾಗೂ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (DYFI) ಆಗ್ರಹಿಸಿವೆ.**

SFI ಹಾಗೂ ಆಜಊಖ ಕೊಪ್ಪಳ ಜಿಲ್ಲಾ ಸಮಿತಿಗಳ ನೇತೃತ್ವದಲ್ಲಿ ಬುಧವಾರ ಕನಕಗಿರಿ ತಹಸೀಲ್ದಾರ್ ಕಚೇರಿ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿ, ಏಕಖಅ ನೇಮಕಾತಿ ಪ್ರಕ್ರಿಯೆಯಲ್ಲಿನ ಅಕ್ರಮಗಳ ಕುರಿತು ಪ್ರತಿಭಟನೆ ನಡೆಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಸಂಘಟನೆಗಳ ಮುಖಂಡರು, ವರ್ಷಗಳ ಕಾಲ ಹಗಲು-ರಾತ್ರಿ ಎನ್ನದೆ ಕಷ್ಟಪಟ್ಟು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ನಡೆಸುತ್ತಿರುವ ಸಾವಿರಾರು ಉದ್ಯೋಗಾಕಾಂಕ್ಷಿಗಳ ಭವಿಷ್ಯದೊಂದಿಗೆ ಯಾವುದೇ ಕಾರಣಕ್ಕೂ ಚೆಲ್ಲಾಟವಾಡಬಾರದು. ನೇಮಕಾತಿ ಪ್ರಕ್ರಿಯೆಯಲ್ಲಿ ಅಕ್ರಮಗಳ ಆರೋಪಗಳು ಕೇಳಿಬಂದಿರುವುದು ಅಭ್ಯರ್ಥಿಗಳಲ್ಲಿ ಸರ್ಕಾರ ಹಾಗೂ ನೇಮಕಾತಿ ವ್ಯವಸ್ಥೆಯ ಮೇಲಿನ ನಂಬಿಕೆಗೆ ಧಕ್ಕೆ ಉಂಟುಮಾಡಿದೆ ಎಂದು ಹೇಳಿದರು.

ಪಶುವೈದ್ಯಾಧಿಕಾರಿಗಳ ನೇಮಕಾತಿ ಪರೀಕ್ಷೆಗೆ ಸಂಬಂಧಿಸಿದಂತೆ ಅಭ್ಯರ್ಥಿಗಳಿಂದ ಲಕ್ಷಾಂತರ ರೂಪಾಯಿ ಹಣ ಪಡೆದಿರುವುದು ಹಾಗೂ ಐಷಾರಾಮಿ ಹೋಟೆಲ್‌ಗಳು ಮತ್ತು ರೆಸಾರ್ಟ್‌ಗಳಲ್ಲಿ ಪರೀಕ್ಷೆ ನಡೆಸಿರುವ ಆರೋಪಗಳ ಕುರಿತು ತನಿಖೆ ನಡೆಯುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಈ ರೀತಿಯ ಅಕ್ರಮಗಳಿಗೆ ಕಡಿವಾಣ ಹಾಕಿ, ತಪ್ಪಿತಸ್ಥರು ಯಾರೇ ಆಗಿದ್ದರೂ ಅವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಮುಂದಿನ ದಿನಗಳಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ 15 ಸಾವಿರ ಶಿಕ್ಷಕರ ಹುದ್ದೆಗಳು, ಕ್ರೈಸ್ ಇಲಾಖೆಯ ಮುರಾರ್ಜಿ ದೇಸಾಯಿ ವಸತಿ ಶಾಲೆಗಳು, ಪೊಲೀಸ್ ಇಲಾಖೆ, ಕಂದಾಯ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಹುದ್ದೆಗಳ ನೇಮಕಾತಿಗೆ ಪರೀಕ್ಷೆಗಳು ನಡೆಯಲಿವೆ. ಈ ಎಲ್ಲ ಪರೀಕ್ಷೆಗಳನ್ನು ಸಂಪೂರ್ಣ ಪಾರದರ್ಶಕತೆ ಹಾಗೂ ಕಟ್ಟುನಿಟ್ಟಿನ ಭದ್ರತೆಯೊಂದಿಗೆ ನಡೆಸಬೇಕು ಎಂದು ಆಗ್ರಹಿಸಿದರು.

2ನೇ ಪುಟಕ್ಕೆ

# ಪ್ರಜಾಸೇವಾ ಆಂದೋಲನ ಸಭೆ

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ಜಿಲ್ಲೆಯ್ಲಲಿನ ಸಾರ್ವಜನಿಕರ ಕುಂದು-ಕೊರತೆಗಳನ್ನು ಶೀಘ್ರವಾಗಿ ಪರಿಹರಿಸುವ ನಿಟ್ಟಿನಲ್ಲಿ ರಾಜ್ಯಾದ್ಯಂತ ಪ್ರತಿ ತಾಲ್ಲೂಕು ಮಟ್ಟದಲ್ಲಿ ಪ್ರಜಾಸೇವಾ ಆಂದೋಲನ ಸಭೆಗಳನ್ನು ಪ್ರತಿ ಜಿಲ್ಲೆಗಳಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ಮತ್ತು ಸ್ಥಳೀಯ ಶಾಸಕರ ನೇತೃತ್ವದಲ್ಲಿ ಹಾಗೂ ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,**

ಪೊಲೀಸ್ ಅಧೀಕ್ಷಕರು/ ಆಯುಕ್ತರು, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು(ವನ್ಯಜೀವಿ) ಇವರ ನೇತೃತ್ವದಲ್ಲಿ ಜಂಟಿಯಾಗಿ ತಾಲ್ಲೂಕು ಮಟ್ಟದಲ್ಲಿ ಪ್ರಜಾಸೇವಾ ಆಂದೋಲನ ಸಭೆಗಳನ್ನು ಹಮ್ಮಿಕೊಳ್ಳುವಂತೆ ಪ್ರಜಾಸೇವಾ ಇಲಾಖೆಯ ಸರ್ಕಾರದ ಉಪ ಕಾರ್ಯದರ್ಶಿಗಳು ನಿರ್ದೇಶಿಸಿದ್ದಾರೆ.

ಅದರಂತೆ ಸೆಪ್ಟೆಂಬರ್ 5 ರಂದು ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ಚಿಕ್ಕವಂಕಲಕುಂಟಾ ಗ್ರಾಮದ ಬುದ್ಧ ಬಸವ ಅಂಬೇಡ್ಕರ್ ಭವನದಲ್ಲಿ ಬೆಳಿಗ್ಗೆ 10 ಗಂಟೆಯಿಂದ ಸಂಜೆ 4.30 ಗಂಟೆಯವರೆಗೆ ಪ್ರಜಾಸೇವಾ ಆಂದೋಲನ ಸಭೆಯನ್ನು ಆಯೋಜಿಸಲಾಗಿದ್ದು, ಈ ಸಭೆಯಲ್ಲಿ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ತಮ್ಮ ಅಹವಾಲುಗಳನ್ನು ಸಲ್ಲಿಸಲಿ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಬಹುದು ಎಂದು ಜಿಲ್ಲಾಧಿಕಾರಿ ಡಾ.ಸುರೇಶ ಬಿ.ಇಟ್ನಾಳ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಾಲ್ಮೀಕಿ ನಿಗಮದ ಹಣ ವಾಪಸ್ ಬರುವವರೆಗೆ ಹೋರಾಟ ನಿಲ್ಲದು: ನವೀನ್ ಗುಳಗಣ್ಣವರ್

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಹಣ-ಕಾಸು ಹಗರಣಕ್ಕೆ ಸಂಬಂಧಿಸಿದಂತೆ ಸಚಿವ ಸ್ಥಾನಕ್ಕೆ ಬಿ. ನಾಗೇಂದ್ರ ಅವರು ರಾಜೀನಾಮೆ ನೀಡಿದ್ದರೂ ಸಹ, ದುರ್ಬಳಕೆಯಾಗಿರುವ ?187 ಕೋಟಿ ಹಣ ಸಂಪೂರ್ಣವಾಗಿ ನಿಗಮದ ಖಾತೆಗೆ ಜಮಾ ಆಗುವವರೆಗೆ ಬಿಜೆಪಿ ಹೋರಾಟ ಹಿಂಪಡೆಯುವುದಿಲ್ಲ ಎಂದು ಕೊಪ್ಪಳ ಜಿಲ್ಲಾ ಬಿಜೆಪಿ ಅಧ್ಯಕ್ಷ ನವೀನ್ ಕುಮಾರ್ ಗುಳಗಣ್ಣವರ್ ತಿಳಿಸಿದ್ದಾರೆ.**

ನಗರದ ಪತ್ರಿಕಾ ಭವನದಲ್ಲಿ ಬುಧವಾರ ಏರ್ಪಡಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಕ್ಷದ ಹಿರಿಯ




ನಾಯಕರ ನಿರ್ಣಯದಂತೆ ಲಿಂಗಸೂರಿನಿಂದ ಬಳ್ಳಾರಿವರೆಗೆ ಹತ್ತು ದಿನಗಳ ಕಾಲ ಬೃಹತ್ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ. ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರ ನೇತೃತ್ವದಲ್ಲಿ ಆರಂಭವಾಗಿರುವ ಈ ಪಾದಯಾತ್ರೆಯು ಸೆಪ್ಟೆಂಬರ್ 4 ರಂದು ಕೊಪ್ಪಳ ಜಿಲ್ಲೆಗೆ ಆಗಮಿಸಲಿದ್ದು, ಸೆಪ್ಟೆಂಬರ್ 6 ರವರೆಗೆ ಮೂರು ದಿನಗಳ ಕಾಲ ಜಿಲ್ಲೆಯಲ್ಲಿ ಸಂಚರಿಸಲಿದೆ. ಕನಕಗಿರಿ ವಿಧಾನಸಭಾ ಕ್ಷೇತ್ರದ ಕಾರಟಗಿ ತಾಲೂಕಿನ ಮೂಲಕ ಪ್ರವೇಶಿಸಿ, ಗಂಗಾವತಿ ನಗರ ಹಾಗೂ ವಿವಿಧ ಭಾಗಗಳಲ್ಲಿ ಹಾದು ಕಂಪ್ಲಿ ಮಾರ್ಗವಾಗಿ ಬಳ್ಳಾರಿಗೆ ತೆರಳಲಿದೆ. ಈ ಸಂದರ್ಭದಲ್ಲಿ ಜಿಲ್ಲೆಯ ವಿವಿಧೆಡೆ ಬಹಿರಂಗ ಸಭೆಗಳನ್ನು ಆಯೋಜಿಸಲಾಗಿದೆ. ರಾಜ್ಯದ ಕಾಂಗ್ರೆಸ್ ಸರ್ಕಾರದ ದುರಾಡಳಿತ ಮತ್ತು ನಿಗಮದಲ್ಲಿ ನಡೆದ ಭ್ರಷ್ಟಾಚಾರವನ್ನು ಜನ-ರಿಗೆ ತಲುಪಿಸುವುದು ಹಾಗೂ ಹಣವನ್ನು ಮರಳಿ ನಿಗಮದ ಖಾತೆಗೆ ಜಮೆ ಮಾಡಿಸುವುದು ಈ ಪಾದಯಾತ್ರೆಯ ಮುಖ್ಯ ಉದ್ದೇಶವಾಗಿದೆ ಎಂದು ವಿವರಿಸಿದರು.

ಈ ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ಪ್ರಮುಖರಾದ ಬಸವನಗೌಡ ಪಾಟೀಲ್, ವಿಜಯ್ ತಾಳಕೇರಿ, ಸುನಿಲ್ ಹೆಸರೂರು, ಸೋಮಶೇಖರ ಗೌಡ ಪಾಟೀಲ್, ಶಿವಪ್ಪ ವಾದಿ ಸೇರಿದಂತೆ ಹಲವು ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

# ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಲಿ: ಹಾಲಪ್ಪ ಆಚಾರ್

ಅ.ಶ. ಸುದ್ದಿ ಕುಕನೂರ

**ಕುಕನೂರ : ಉನ್ನತ ಶಿಕ್ಷಣ ಸಚಿವ ಬಸವರಾಜ ರಾಯರೆಡ್ಡಿ ಅವರು ಎಲ್ಲಾ ಧರ್ಮಗಳಿಗಿಂತ ಇಸ್ಲಾಂ ಧರ್ಮ ಶ್ರೇಷ್ಠವಾಗಿದೆ ಎಂಬ ಎಡಬಿಡಂಗಿ ತನದ ಹೇಳಿಕೆಯಿಂದ ಯಲಬುರ್ಗಾ ಕ್ಷೇತ್ರ ರಾಷ್ಟ್ರ ಮಟ್ಟದ್ದಲ್ಲಿ ತಲೆ ತಗ್ಗಿಸುವಂತಾಗಿದೆ. ಸಚಿವ ರಾಯರೆಡ್ಡಿ ಈ ಕೂಡಲೇ ಕ್ಷಮೆ ಕೇಳಿ ನೈತಿಕ ಹೊಣೆ ಹೊತ್ತು ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಮಾಜಿ ಸಚಿವ ಹಾಲಪ್ಪ ಆಚಾರ್ ಹೇಳಿದರು.**

ಅವರು ಮಸಬಹಂಚಿನಾಳ ಗ್ರಾಮದ ಬಿಜೆಪಿ ಕಾರ್ಯಾಲಯದಲ್ಲಿ ಬುಧವಾರದಂದು ಸುದ್ದಿಗೋಷ್ಠಿ ನಡೆಸಿ ಮಾತನಾಡಿ ಸಚಿವ ಬಸವರಾಜ ರಾಯರೆಡ್ಡಿ ಅವರು ಸಮಸ್ತ ಹಿಂದೂ ಧರ್ಮದ ಜನರ ಮನಸ್ಸಿಗೆ ಘಾಸಿ ಗೊಳಿಸುವ ಮಾತು ಆಡಿದ್ದಾರೆ, ಎಲ್ಲರಿಗೂ ಅವರವರ ಧರ್ಮ ಶ್ರೇಷ್ಠ, ಆದರೆ ರಾಯರೆಡ್ಡಿ ಎಲ್ಲಾ ಧರ್ಮಗಳಿಗಿಂತ ಇಸ್ಲಾಂ ಧರ್ಮ ಶ್ರೇಷ್ಠವಾಗಿದೆ, ನಾನು ಮಠ ಮಾನ್ಯಗಳಿಗೆ ಹೋಗುವುದಿಲ್ಲ ಹಜ್ ಗೆ ಹೋಗುವ ಆಸೆ ಇದೆ ಎಂದು ಎಡಬಿಡಂಗಿ ತನದ ಹೇಳಿಕೆ ನೀಡಿದ್ದಲ್ಲದೆ, ತಮ್ಮ ಹೇಳಿಕೆಯನ್ನು ಸಮರ್ಥ-ನೆ ಮಾಡಿಕೊಳ್ಳುತ್ತಾರೆ, ತನ್ನಷ್ಟು ಜ್ಞಾನ ಬೇರೆ ಯಾರಿಗೂ ಇಲ್ಲಾ, ನನ್ನಷ್ಟು ಧರ್ಮಗಳ ಅಧ್ಯಯನ ಮಾಡಿದವರು ಬೇರೆ



ಯಾರು ಇಲ್ಲಾ ಎಂಬ ಅಹಂ ರಾಯರೆಡ್ಡಿಗೆ ಇದೆ ಎಂದರು.

ನಿಮ್ಮ ತಂದೆಯವರು ಎಂತಹ ಧರ್ಮಮಿಷ್ಟರು ವೀರಶೈವ ಮಹಾಸಭಾದ ಅಧ್ಯಕ್ಷರಾಗಿ ಸಮಾಜ ಸೇವೆ ಮಾಡಿದವರು ಅಂತವರ ಹೊಟ್ಟೆಯಲ್ಲಿ ಹುಟ್ಟಿ ಧರ್ಮ ವಿರೋಧಿ ಹೇಳಿಕೆಗಳನ್ನು ನೀಡುವುದು ನಾಚಿಕೆಗೇಡಿತನ, ತಾವೊಬ್ಬ ಸಂವಿಧಾನಾತ್ಮಕ ಹುದ್ದೆಯಲ್ಲಿರುವವರು ಜವಾಬ್ದಾರಿಯುತ ಹೇಳಿಕೆಗಳನ್ನು ನೀಡಬೇಕು, ಕ್ಷೇತ್ರದಲ್ಲಿ ಬರ ಆವರಿಸಿದೆ ತಾಲೂಕಿನ ಜನತೆ ಕತ್ತಲಲ್ಲಿ ಬದುಕು ನಡೆಸುತ್ತಿದ್ದಾರೆ, ಯಲಬುರ್ಗಾ ತಾಲೂಕು ಬರ ಘೋಷಣೆ ಆಗಿಲ್ಲ, ಕೆರೆ ತುಂಬಿಸುವ ಯೋಜನೆಗಳು ನೆನೆಗುದಿಗೆ ಬಿದ್ದಿವೆ, 10 ವರ್ಷಗಳ ಹಿಂದೆ ಘೋಷಣೆ ಮಾಡಿದ ಕೆರೆ ತುಂಬಿಸುವ ಪೈಪ್ಲೈನ್ ಕಾಮಗಾರಿ ಬಾನಾಪುರ ದಾಟಿಲ್ಲ, ರೈತರು ಕಣ್ಣೀರಿನಲ್ಲಿ ಕೈ ತೊಳೆಯುತ್ತಿದ್ದಾರೆ.

ಮೊದಲು ಕ್ಷೇತ್ರದಲ್ಲಿರುವ ಸಮಸ್ಯೆಗಳನ್ನು ಪರಿಹರಿಸಿ, ಜಾತಿ ಧರ್ಮಗಳನ್ನು ವಿಂಗಡಣೆ ಮಾಡಿ ಧರ್ಮದ ಆಧಾರದ ಮೇಲೆ, ಜಾತಿ ಆಧಾರದ ಮೇಲೆ, ರಾಜಕಾರಣ ಮಾಡಬೇಡಿ. ಕೋಟ್ಯಾಂತರ ಹಿಂದೂಗಳ ಧಾರ್ಮಿಕ

> "ರಾಯರೆಡ್ಡಿ ಹೇಳಿಕೆಯಿಂದ ಯಲಬುರ್ಗಾ ಕ್ಷೇತ್ರ ರಾಷ್ಟ್ರ ಮಟ್ಟದ್ದಲ್ಲಿ ತಲೆ ತಗ್ಗಿಸುವಂತಾಗಿದೆ,, ನೈತಿಕ ಹೊಣೆ ಹೊತ್ತು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಲಿ: ಮಾಜಿ ಸಚಿವ ಹಾಲಪ್ಪ ಆಚಾರ್ ಆಗ್ರಹ,,

ಭಾವನೆಗಳಿಗೆ ನೋವುಂಟು ಮಾಡಿದ್ದೀರಿ ಈ ಕೂಡಲೇ ಬೇಷರತ್ ಕ್ಷಮೆ ಕೇಳಿ ನೈತಿಕ ಹೊಣೆ ಹೊತ್ತು ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು.

ಈ ಸಂಧರ್ಭದಲ್ಲಿ ಬಿಜೆಪಿ ಮಂಡಲ ಅಧ್ಯಕ್ಷರಾದ ಮಾರುತಿ ಗಾವರಾಳ, ಮುಖಂಡರಾದ ಶಿವಕುಮಾರ ನಾಗಾಲಾಪುರಮಠ, ಶರಣಪ್ಪ ಬಣ್ಣದಬಾವಿ, ಶಂಬಣ್ಣ ಜೋಳದ, ಮಂಜುನಾಥ ನಾಡಗೌಡ, ಲಕ್ಷ್ಮಣ ಕಾಳಿ, ವಿನಾಯಕ ಯಾಳಗಿ ಸೇರಿದಂತೆ ಇತರರು ಇದ್ದರು.

ಲೇಖಕರ ದಿನಚರಿ...

# ಚರಪು

**ಮತ್ತೆ ಬಾಲ್ಯದ ದಿನಗಳ ಮೆಲುಕಿಗೆ ಹೋದರೆ ಹೆಚ್ಚಾಗಿ ನೆನಪಾಗುವುದು ಚರಪು .ಈಗ ಈ ಪದದ ಪ್ರಯೋಗ ಯಾಕೋ ತುಂಬಾ ಕಡಿಮೆಯಾಗಿದೆ ಅಥವಾ ಇಲ್ಲವೇ ಇಲ್ಲ ಎನಿಸುತ್ತಿದೆ. ಇದರ ಬದಲು ಪ್ರಸಾದ ಎಂದು ಬಿಡುವುದು ವಾಡಿಕೆಯಾಗಿದೆ. ದೇವಸ್ಥಾನಗಳಲ್ಲಿ ಅಥವಾ ಕೆಲವೊಂದು ಸಮಾರಂಭಗಳಲ್ಲಿ ಪೂಜೆಯ ನಂತರ ನೈವೇದ್ಯವನ್ನು ಅಲ್ಲಿ ಬಂದ ಭಕ್ತರಿಗೆಲ್ಲ ವಿನಿಯೋಗ ಮಾಡುವುದು ವಾಡಿಕೆ. ಇಂತಹ ನೈವೇದ್ಯದ ಪ್ರಸಾದಕ್ಕೆ ಚರಪು ಅಥವಾ ಚರುಪು ಎಂದು ಕರೆಯುತ್ತಾರೆ. ಸಾಮೂಹಿಕವಾಗಿ ಸಮಾರಂಭಗಳಲ್ಲಿ ಹಂಚುವುದು ಚರಪು ಆದರೆ ಮನೆಗಳಿಗೆ ಕರೆದು ಕೊಡುವ ತಿಂಡಿಗಳಿಗೆ ಬಾಗಿನ ಎನ್ನುತ್ತಾರೆ.**

ಮಕ್ಕಳಾಗಿದ್ದಾಗ ದೇವಸ್ಥಾನಗಳಿಗೆ ಕೆಲವೊಮ್ಮೆ ಗಣಪತಿ ಪೆಂಡಾಲುಗಳು ರಾಮ ಮಂದಿರದ ಸಂಗೀತ ಕಚೇರಿಗಳು ಹರಿಕಥೆ ಪ್ರವಚನ ಇವುಗಳಿಗೆಲ್ಲ ಹೋಗಲು ನಮಗೆ ಮುಖ್ಯ ಆಕರ್ಷಣೆ ಪ್ರೇರಣೆ ಎಂದರೆ ಅಲ್ಲಿ ಹಂಚುವ ಚರುಪುಗಳೇ ಎಂದರೆ ಅತಿಶಯೋಕ್ತಿ ಏನಲ್ಲ. ಇದಕ್ಕೆ ಪನಿವಾರ ಅಂತ ಇನ್ನೊಂದು ಹೆಸರೂ ಇದೆ.

ಸಾಧಾರಣವಾಗಿ ಸಿದ್ಧಪಡಿಸಿದ ಅಡುಗೆ/ತಿನಿಸುಗಳನ್ನು ಮಂತ್ರೋಚ್ಚಾರಣೆ ಮತ್ತು ಭಕ್ತಿಯಿಂದ ದೇವರಿಗೆ ಅರ್ಪಿಸಿದಾಗ ಅದು 'ನೈವೇದ್ಯ'ವಾಗುತ್ತದೆ. ದೇವರಿಂದ ಸ್ವೀಕರಿಸಲ್ಪಟ್ಟು, ದೇವರ ದಿವ್ಯ ಶಕ್ತಿ ಹಾಗೂ ಆಶೀರ್ವಾದವನ್ನು ಒಳಗೊಂಡು ಭಕ್ತರಿಗೆ ತಲುಪಿದಾಗ ಅದು 'ಚರುಪು' ಅಥವಾ 'ಪ್ರಸಾದ' ಎನಿಸಿಕೊಳ್ಳುತ್ತದೆ.

ಚರುಪುಗಳಲ್ಲೂ ಅದೆಷ್ಟು ಬಗೆ ವೈವಿಧ್ಯಗಳು ಅಂತೀರಾ? ತೀರಾ ಸಾಮಾನ್ಯ ಚರುಪು ಅಂದರೆ ಕಡಲೆ ಹಿಟ್ಟು, ಅದೇ ರೀ ಗನ್ ಪೌಡರ್ ಅಂತ ಎಲ್ಲರೂ ಆಡಿಕೊಳ್ಳುತ್ತಾರಲ್ಲ ಅದು ಬೆಲ್ಲ ಮತ್ತು ಹುರಿಗಡಲೆ ಒಂದು ಚೂರು ಏಲಕ್ಕಿ ಹಾಕಿ ಕುಟ್ಟಿ ಪುಡಿ ಮಾಡಿದ ಇದು ಸಣ್ಣ ಸಣ್ಣ ಕಾಗದದ ಕವರುಗಳಲ್ಲಿ ಕೆಲವೊಮ್ಮೆ ಪೇಪರ್ ತುಂಡುಗಳ ಮೇಲೆ ಹಾಕಿ ಕೊಡ್ತಾ ಇದ್ರು. ಅದೆಂತ ರುಚಿಯಂತಿರಾ? ಮರೆತೇ ಹೋದ ಹಾಗೆ ಆಗಿದ್ದ ಇದನ್ನು ಮೊನ್ನೆ ಯಾವತ್ತೋ ಈ ಬಗ್ಗೆ ಮಾತನಾಡುತ್ತಾ ಕುಳಿತಾಗ ಸರ್ ಅಂತ ಎದ್ದು ಮಿಕ್ಸಿ ಜರ್ ಅನ್ನಿಸಿ ರೆಡಿ ಮಾಡಿ ನಾನು ನನ್ನ ತಂಗಿಯರು ಸವಿದೇ ಬಿಟ್ಟೆವು. ಆದರೆ ಚರುಪಿನ ರುಚಿ ಮನೆಯಲ್ಲಿ ಮಾಡಿದ ಪದಾರ್ಥಕ್ಕೆ ಅದೆಲ್ಲಿಂದ ಬರುತ್ತೆ ಹೇಳಿ? ಇದಕ್ಕಿಂತ ಸ್ವಲ್ಪ ಮೇಲ್ಮಟ್ಟಕ್ಕೆ ಲಗ್ಗುರಿ ಅನ್ನಿಸುತ್ತಿದ್ದು ಕೊಬ್ಬರಿ ಸಕ್ಕರೆ. ಇದು ಸಹ ಪೇಪರ್ ನ ಚೂರುಗಳ ಮೇಲೆ ಕೊಡ್ತಾ ಇದ್ದದ್ದು ಎಲ್ಲಿ ಖರ್ಚಾಗುತ್ತೋ ಅಂತ ಎರಡು ಬೆರಳುಗಳಿಂದ ಚೂರುಚೂರೇ ತೆಗೆದುಕೊಂಡು ತಿನ್ನುತ್ತಿದ್ದ ಸವಿ ನೆನಪು. ಬಾಳೆಹಣ್ಣಿನ ರಸಾಯನ ಮತ್ತು ಕೆಲವೊಮ್ಮೆ ವಿವಿಧ ಹಣ್ಣು ಹಾಲು ಮೊಸರು ಎಲ್ಲಾ ಸೇರಿದ ಪಂಚಾಮೃತ ಸಹ. ಪಂಚ ಕಜ್ಜಾಯ ಕೆಲವೊಮ್ಮೆ ಆದರೆ ಅವಲಕ್ಕಿ ಕಾಯಿ ಬೆಲ್ಲ ಸಹ ಈ ಚರುಪುಗಳ ಯಾದಿಗೆ ಸೇರಿಕೊಳ್ಳುತ್ತದೆ.

ಧನುರ್ಮಾಸದ ಬೆಳಗಿನ ಜಾವದ ಪೂಜೆಯ ನಂತರದ ಬಿಸಿ ಬಿಸಿ ಸೀ ಪೊಂಗಲ್ ಖಾರಾ ಪೊಂಗಲ್ ನೆನಪಿಸಿಕೊಳ್ಳದವರ್ಯಾರು? ಇನ್ನು ದೊನ್ನೆಗಳಲ್ಲಿ ಹಾಕಿ ಕೊಡುತ್ತಿದ್ದ ಹೆಸರು ಬೇಳೆ ಕೋಸಂಬರಿ, ಕಡಲೆಬೇಳೆ ಕೋಸಂಬರಿ, ಕಡಲೆಕಾಳು ಉಸಲಿ, ಹೆಸರು ಕಾಳು ಉಸಲಿ, ಹುಳಿ ಅವಲಕ್ಕಿ ಹೆಸರು ಕೇಳ್ತಾ ಇದ್ದರೇನೇ ಬಾಯಲ್ಲಿ ನೀರು ಬರ್ತಾ ಇದೆ. ದೇವರ ನೈವೇದ್ಯ ಅನ್ನುವುದಕ್ಕೆ ಏನೋ ಅದಕ್ಕೆ ಅಷ್ಟೊಂದು ವಿಶಿಷ್ಟ ರುಚಿ ಅನಿಸುತ್ತೆ .ದಂಡಿಯಾಗಿ ಕಾಯಿತುರಿ ಹಾಕಿ ಇಂಗು ಒಗ್ಗರಣೆ ಕೊಟ್ಟು ಮಧ್ಯಮಧ್ಯ ಕೊತ್ತಂಬರಿ ಸೊಪ್ಪಿನ ಹಸಿರು ಕಾಣಿಸುತ್ತಿದ್ದ ಆ ಕೋಸಂಬರಿಗಳು ಉಸಲಿಗಳು ಆಗ ಅದಕ್ಕೆ ಗುಗ್ಗುರಿ ಅಂತಾನೂ ಕರೀತಾ ಇದ್ದ ನೆನಪು. ಆಮೇಲೆ ಹದವಾಗಿ ಹುಳಿ, ಖಾರ ಸಿಹಿ ಬೆರೆತ ಆ ಹುಳಿಯವಲಕ್ಕಿಯ ಗಮಲು ಮರೆತೇನೆಂದರೆ ಮರೆಯಲಿ ಹ್ಯಾಂಗ?

ನಾವು ಚಾಮುಂಡಿಪುರಂ ಮನೆಯಲ್ಲಿ ಇದ್ದಾಗ ಎದುರು ಮನೆಯಲ್ಲಿ ಸಂಗೀತ ಹೇಳಿಕೊಡುತ್ತಿದ್ದರು ನಾನಿನ್ನು ಚಿಕ್ಕವಳು ಆಗ ಸಂಗೀತಕ್ಕೆ ಸೇರಿರಲಿಲ್ಲ .ಆದರೆ ಪ್ರತಿ ಶುಕ್ರವಾರ ಅವರು ಮಾಡುತ್ತಿದ್ದ ಸರಸ್ವತಿ ಪೂಜೆಗೆ ಮಾತ್ರ ಖಾಯಂ ಗಿರಾಕಿ, ಅಲ್ಲಿ ಕೊಡುತ್ತಿದ್ದ ಚರುಪಿನ ಆಸೆಗೆ ಅಂತ ನಿಮಗೆ ಪ್ರತ್ಯೇಕವಾಗಿ ಹೇಳಬೇಕಿಲ್ಲ ತಾನೇ?

ಮೊದಲು ಚಾಮುಂಡಿಪುರಂ ಸರ್ಕಲ್ ನಲ್ಲಿ ಕೂಡಿಸುತ್ತಿದ್ದ ಗಣಪತಿ ದರ್ಶನಕ್ಕೆ ಪ್ರತಿದಿನವೂ ಹೋಗುತ್ತಿದ್ದು ಹಾಗೆಯೇ ನೂರೊಂದು ಗಣಪತಿ ದರ್ಶನಕ್ಕೂ ಸಹ ಯಾರಾದರೂ ಒಬ್ಬರು ಸೇವೆ ಮಾಡಿಸಿ ಚರುಪು ಹಂಚುತ್ತಲೇ ಇದ್ದರು ಅದು ನಮಗೆ ಗಣೇಶನ ದರ್ಶನಕ್ಕೆ ಇದ್ದ ಇನ್ಸೆಂಟಿವ್.

ಹಾಗೆಯೇ ಬೇಸಿಗೆಯಲ್ಲಿ ಸಂಗೀತ ಕಚೇರಿಗಳು ರಾಮಮಂದಿರದಲ್ಲಿ ಶನಿವಾರ ಸಂಜೆ ಕೊಡುತ್ತಿದ್ದ ರಾಮದೇವರ ಪ್ರಸಾದದ ಚರುಪು ತಡವಾಗಿ ಹೋದರೆ ಖಾಲಿ ಆಗಿಬಿಡುತ್ತಿತ್ತು ಎಂದು ದೇವಸ್ಥಾನ ಬಾಗಿಲು ತೆಗೆದಾಗಿನಿಂದ ಅಲ್ಲೇ ರಾಮಮಂದಿರದಲ್ಲೇ ಆಟವಾಡುತ್ತಿತ್ತು ನಮ್ಮ ಗುಂಪು.

ಪ್ರೈಮರಿ ಮಿಡಲ್ ಸ್ಕೂಲಿನಲ್ಲಿ ಇದ್ದಾಗ ಪರೀಕ್ಷೆಗೆ ಮುಂಚೆ ಶಾರದಾ ಪೂಜೆ ಮಾಡಿ ಚರುಪು ಹಂಚುತ್ತಿದ್ದು ಈ ಸಂದರ್ಭದಲ್ಲಿ ನೆನಪಿಗೆ ಬರ್ತಾ ಇದೆ.

ಮುಂದೆ ಚಿಕ್ಕಬಳ್ಳಾಪುರದಲ್ಲಿ ಮೊದಲ ಬಾರಿ ಆಫೀಸಿನಲ್ಲಿ ಶುಕ್ರವಾರ ಲಕ್ಷ್ಮಿ ಪೂಜೆ ಮಾಡಿ ಚರುಪು ಹಂಚುತ್ತಿದ್ದರು. ಅಲ್ಲಿ ಚರುಪು ಮಾಡಿ ತರುತ್ತಿದ್ದು ನಮ್ಮ ಕ್ಲಾಸ್ ಫೋರ್ ಆಗಿದ್ದ ಸತ್ಯನಾರಾಯಣ ಅವರು ಅಲ್ಲಿನ ರಾಯರ ಮಠದ ಅರ್ಚಕರು ಹೌದು. ಯಾರಾದರೂ ಒಬ್ಬೊಬ್ಬರು ಒಂದೊಂದು ವಾರ ಅದರ ಖರ್ಚಿನ ಬಾಬತ್ತನ್ನು ಅವರಿಗೆ ಕೊಟ್ಟುಬಿಡುತ್ತಿದ್ದುದು ವಾಡಿಕೆ. ಸಂಜೆ 4:00 ವೇಳೆಗೆ ಪೂಜೆ ಮಾಡಿ ಹಂಚಿದರೆ ಕಾಫಿಯ ಜೊತೆ ಎಂಥಾ ಸಾಥ್ ಅಂತೀರಿ! ನಾನು ಮೊಟ್ಟಮೊದಲು ಕಡಲೆಬೇಳೆ ಉಸ್ಲಿ ರುಚಿ ನೋಡಿದ್ದು ಅಲ್ಲೇ. ನಾನು ಅಲ್ಲಿ ಒಬ್ಬಳೇ ಮನೆ ಮಾಡಿಕೊಂಡು ಇದ್ದಿದರಿಂದ ತಂದ ಚರುಪನ್ನು ನನ್ನ ಊಟದ ಡಬ್ಬಿಗೂ




ತುಂಬಿಕೊಟ್ಟುಬಿಡುತ್ತಿದ್ದರು ರಾತ್ರಿಯ ಅಡಿಗೆ ಗೋಜೇ ಇರುತ್ತಿರಲಿಲ್ಲ.

ಇತ್ತೀಚಿಗೆ ರಾಮನವಮಿ ಸಂದರ್ಭದಲ್ಲಿ ಆಟೋ ಸ್ಟ್ಯಾಂಡ್‌ಗಳು ಅಥವಾ ಕೆಲವೊಂದು ಅಂಗಡಿಯವರು ಸೇರಿ ಈ ರೀತಿ ಪಾನಕ,ಮಜ್ಜಿಗೆ ಕೋಸಂಬರಿ ಇನ್ನಿತರ ಚರುಪುಗಳನ್ನು ಹಂಚುವುದನ್ನು ಕಾಣಬಹುದು. ಮೈಸೂರಿನಲ್ಲಿ ಪ್ರತಿ ಆಷಾಢ ಶುಕ್ರವಾರಗಳಲ್ಲಿ ಈ ರೀತಿ ಪ್ರಸಾದ ವಿನಿಯೋಗ ನಡೆಯುತ್ತಿರುವುದು ಸಾಮಾನ್ಯ ದೃಶ್ಯ. ವೈದಿಕ ಸಾಹಿತ್ಯದಲ್ಲಿ 'ಚರು' ಎಂದರೆ ದೇವತೆಗಳಿಗೆ ಅರ್ಪಿಸಲು ಪ್ರತ್ಯೇಕವಾಗಿ, ಅತ್ಯಂತ ಶುದ್ಧತೆಯಿಂದ ತಾಮ್ರ ಅಥವಾ ಮಣ್ಣಿನ ಪಾತ್ರೆಯಲ್ಲಿ ಬೇಯಿಸುವ ಪವಿತ್ರ ಅನ್ನ (ಹವಿಷ್ಯ).?ಯಜ್ಞ-ಯಾಗಾದಿಗಳನ್ನು ಮಾಡುವಾಗ ಅಗ್ನಿ ದೇವನ ಮೂಲಕ ಇತರ ದೇವತೆಗಳಿಗೆ (ಇಂದ್ರ, ವರುಣ, ಅಗ್ನಿ ಇತ್ಯಾದಿ) ಅರ್ಪಿಸುವ ಮುಖ್ಯ ಆಹುತಿಯೇ ಚರು.ಯಜ್ಞ ಮುಗಿದ ನಂತರ ಈ 'ಚರು'ವನ್ನು ಯಜಮಾನ, ಋಷಿ-ಮುನಿಗಳು ಹಾಗೂ ಉಪಸ್ಥಿತರಿದ್ದ ಭಕ್ತರು ಪ್ರಸಾದವಾಗಿ ಸ್ವೀಕರಿಸುತ್ತಿದ್ದರು. ಇದುವೇ ಕಾಲಕ್ರಮೇಣ 'ಚರುಪು' ಎಂದು ಆಡುಭಾಷೆಯಲ್ಲಿ ರೂಪಾಂತರಗೊಂಡಿತು. ಏನಾದರೂ ಆಗಲಿ ಆಗ ಕೈಗಳಲ್ಲೇ ಪಡೆದು ಹಾಗೆಯೇ ತಿನ್ನುತ್ತಿದ್ದ ಆ ಚರುಪಿನ ರುಚಿ ಹುರುಪಿನ ದಿನಗಳು ಹಾಗೇ ಮರಳಿ ಮತ್ತೆ ಬಂದರೆ ಎಷ್ಟು ಚೆನ್ನ ಎನ್ನಿಸಿದ್ದಂತೂ ಹೌದು.



ಸುಜಾತಾ ರವೀಶ್
ಮೈಸೂರು

# ಬದುಕು ಬಲು ಭಾರ



ಅಹಂಭಾವದಿ ಕೊರಡಾಗಿ ಸ್ವಾರ್ಥದ ಅಮಲಲಿ ತೇಲಿ ಒಂಟಿ ನಾವಿಕನಂತೆ ಪ್ರಯಾಣ ಸಾಗಿ. ದೂರದಲ್ಲಿ ಹರಿಯುವ ಜಲಪಾತವಾಗಿ ದುಮ್ಮಿಕ್ಕಿದರೂ ಒಮ್ಮನದ ನೋಟ ಬೀರಲೇ ಇಲ್ಲ. ತುತ್ತು ಬಾಯಿಗೆ ಇಟ್ಟದ್ದು ರಕ್ತ ಮಾಂಸ ಹಂಚಿದ್ದು ನೆನಪಿಗೆ ಬಾರದೆ ಹೋಯಿತು ಹೊಟ್ಟೆ ಬಟ್ಟೆ ಕಟ್ಟಿ ಪೋಷಣೆಯ ಮಾಡಿದ್ದು ತನ್ನವರಿಗಾಗಿ ಹಂಬಲಿಸಿದ್ದು ಗೋಡೆ ಮೇಲಿನ ಚಿತ್ರಪಟವಾಗಿ ಕಾಣಿಸುತ್ತಿದೆ ಧಾವಂತದ ಬದುಕು ನೀಗಿಸಲು ನಂದನ ಸಂವತ್ಸರ ದುಸ್ತರವಾಗಿದೆ. ಕೊನೆಯ ಕ್ಷಣ ಬಳಸಲೇ ಇಲ್ಲ ನನ್ನವರು ಬಾರದೆ ದೂರದಲಿ ನಿಂತು ಹೋಗುವುದು ನಿಶ್ಚಿತ ನೆರವಿಗೆ ಬಾರದ ಸ್ಥಿತಿಯ ಬಗ್ಗೆ ಏನೆನ್ನಲಿ ಎಲ್ಲವೂ ಗೌಣ ಬದುಕಿನಲ್ಲಿ ಹೋಗುವ ಮುನ್ನ ಯೋಚಿಸಿ. ಬದುಕು ಬಲು ಭಾರ ಸವೆಸಿದರೂ ಕೈ ಹಿಡಿದು ನಡೆಸುವರೂ ಬೇಕಿತ್ತು ಕೊನೆಗಾಲಕೆ ಈಗೀಗ ಸಮಯ ಮಾಡಿಕೊಂಡು ಬರುವವರೂ ಇಲ್ಲ ಎಲ್ಲಾ ಅಯೋಮಯ ದುಸ್ತರವಾಗಿದೆ ಬದುಕು ಬಲು ಭಾರ ಎತ್ತುವುದು ಹರಸಾಹಸ.



ರೇಷ್ಮಾ ಕಂದಕೂರ

# ಒಂದಾಗಿದ್ದೆ ನಂಜಾಯಿತೆ..?

**ಬಾಳೆ ತೋಟದಲ್ಲಿ ಒಂದಾದ ಒಲವ ಜೋಡಿಗೆ ಬಹಳ ಕಾಲ ಬಾಳುವ ಭಾಗ್ಯವಿರಲಿಲ್ಲವೇನೋ? ಬಂಧ ಬೆಸೆಯುತ್ತಿದ್ದಂತೆ ಬೇರೆಯಾದರು ಬಹು ಬೇಗನೆ.ಬರಬರನೇ ಸಾಗುತ್ತಿದ್ದ ಸರ್ಪವ ಮೆಟ್ಟಿ, ಅವರಿಬ್ಬರು ಮರಣದೂರ ಬಾಗಿಲ ತಟ್ಟಿ.**





ಶೃತಿಸಿರಿ,ಶಿವಮೊಗ್ಗ.

# ಡಿಜಿಟಲ್ ಲೋಕದಲ್ಲಿ 'ರೀಲ್ಸ್' ಗೀಳು

**ಕೇವಲ ಒಂದು ರೀಲ್ಸ್ ನೋಡೋಣ? ಎಂದು ಮೊಬೈಲ್ ಕೈಗೆತ್ತಿಕೊಂಡವನು, ಮತ್ತೆ ಸಮಯದ ಅರಿವಿಗೆ ಬಂದಾಗ ಒಂದು ಗಂಟೆ ಕಳೆದಿರುತ್ತದೆ! ಇದು ಇಂದಿನ ಡಿಜಿಟಲ್ ಯುಗದ ವಾಸ್ತವಿಕತೆಯ ಚಿತ್ರಣ. ಇಂದಿನ ತಾಂತ್ರಿಕ ಯುಗದಲ್ಲಿ ಮಾನವನ ಜೀವನಶೈಲಿ ಸಂಪೂರ್ಣವಾಗಿ ಬದಲಾಗಿದೆ.**

ಬೆಳಿಗ್ಗೆ ಎದ್ದ ತಕ್ಷಣ ಮೊಬೈಲ್ ಪರದೆ ನೋಡುವುದರಿಂದ ಹಿಡಿದು, ರಾತ್ರಿ ಮಲಗುವವರೆಗೂ ಇಂಟರ್ನೆಟ್ ನಮ್ಮ ದೈನಂದಿನ ಬದುಕಿನ ಅವಿಭಾಜ್ಯ ಭಾಗವಾಗಿದೆ. ಈ ಡಿಜಿಟಲ್ ಜಗತ್ತಿನಲ್ಲಿ ಇತ್ತೀಚಿನ ವರ್ಷಗಳಲ್ಲಿ ಯುವಜನತೆಯನ್ನು ವಿಶೇಷವಾಗಿ ಸೆಳೆದಿರುವ ಹೊಸ ಅಲೆಯೆಂದರೆ 'ರೀಲ್ಸ್' ಸಂಸ್ಕೃತಿ. ಇನ್‌ಸ್ಟಾಗ್ರಾಮ್, ಫೇಸ್‌ಬುಕ್ ಮತ್ತು ಇತರ ಕಿರು ವಿಡಿಯೊ ವೇದಿಕೆಗಳಲ್ಲಿ ಕೆಲವೇ ಕ್ಷಣಗಳ ವಿಡಿಯೊಗಳು ಇಂದು ಕೋಟ್ಯಂತರ ಜನರ ಗಮನ ಸೆಳೆಯುತ್ತಿವೆ. ನೃತ್ಯ, ಹಾಡು, ಹಾಸ್ಯ, ಅಡುಗೆ, ಪ್ರವಾಸ, ಶಿಕ್ಷಣ, ವ್ಯಾಪಾರ, ಆರೋಗ್ಯ ಮಾಹಿತಿ?ಹೀಗೆ ಜೀವನದ ಪ್ರತಿಯೊಂದು ಕ್ಷೇತ್ರವೂ ಇಂದು ಕಿರು ವಿಡಿಯೊಗಳ ಮೂಲಕ ನಮ್ಮ ಮೊಬೈಲ್ ಪರದೆಯ ಮೇಲೆ ಕಾಣಿಸಿಕೊಳ್ಳುತ್ತಿದೆ.

ಏನಿದು ರೀಲ್ಸ್ ಸಂಸ್ಕೃತಿ? ಕಿರು ಅವಧಿಯಲ್ಲಿ ಮಾಹಿತಿ ಅಥವಾ ಮನರಂಜನೆಯನ್ನು ತಲುಪಿಸುವುದು ರೀಲ್ಸ್‌ನ ಪ್ರಮುಖ ಆಕರ್ಷಣೆ.

ಕೆಲವು ಸೆಕೆಂಡುಗಳಿಂದ ಒಂದೆರಡು ನಿಮಿಷಗಳವರೆಗಿನ ಈ ವಿಡಿಯೊಗಳು ನೋಡುಗರನ್ನು ಬೇಸರಗೊಳಿಸದೆ, ನಿರಂತರವಾಗಿ ಮತ್ತೊಂದು ವಿಡಿಯೊದತ್ತ ಸೆಳೆಯುವ ಶಕ್ತಿಯನ್ನು ಹೊಂದಿವೆ. ಟಿಕ್‌ಟಾಕ್‌ನಂತಹ ಕಿರು ವಿಡಿಯೊ ವೇದಿಕೆಗಳು ಜನಪ್ರಿಯವಾದ ನಂತರ, ಇತರ ಸಾಮಾಜಿಕ ಜಾಲತಾಣಗಳೂ ಈ ಮಾದರಿಯನ್ನು ಅಳವಡಿಸಿಕೊಂಡವು. ಮೆಟಾ ಸಂಸ್ಥೆಯ ಇನ್‌ಸ್ಟಾಗ್ರಾಮ್ ಮತ್ತು ಫೇಸ್‌ಬುಕ್‌ನಲ್ಲಿ ರೀಲ್ಸ್ ವೈಶಿಷ್ಟ್ಯವನ್ನು ಪರಿಚಯಿಸಿದ ನಂತರ ಈ ಸಂಸ್ಕೃತಿ ಇನ್ನಷ್ಟು ವೇಗವಾಗಿ ಜನಪ್ರಿಯವಾಯಿತು. ಸಿನಿಮಾ ಹಾಡುಗಳಿಗೆ ಹೆಜ್ಜೆ ಹಾಕುವುದು, ಹಾಸ್ಯ ಸಂಭಾಷಣೆಗಳಿಗೆ ಲಿಪ್‌ಸಿಂಕ್ ಮಾಡುವುದು, ಅಡುಗೆಯ ವಿಧಾನಗಳನ್ನು ತೋರಿಸುವುದು, ಪ್ರವಾಸದ ಸುಂದರ ಕ್ಷಣಗಳನ್ನು ಹಂಚಿಕೊಳ್ಳುವುದು?ಹೀಗೆ ಸಾಮಾನ್ಯ ವ್ಯಕ್ತಿಯ ದೈನಂದಿನ ಬದುಕೂ ಇಂದು ಕಿರು ವಿಡಿಯೊದ ವಿಷಯವಾಗುತ್ತಿದೆ.

ರೀಲ್ಸ್ ಇಷ್ಟೊಂದು ಆಕರ್ಷಕವಾಗಿರುವುದೇಕೆ? ಇಂದಿನ ವೇಗದ ಬದುಕಿನಲ್ಲಿ ಜನರು ಕಡಿಮೆ ಸಮಯದಲ್ಲಿ ಹೆಚ್ಚು ವಿಷಯಗಳನ್ನು ನೋಡಲು ಬಯಸುತ್ತಾರೆ. ದೀರ್ಘವಾದ ವಿಡಿಯೊ ಅಥವಾ ಲೇಖನವನ್ನು ನೋಡಲು, ಓದಲು ಸಮಯ ಮತ್ತು ತಾಳ್ಮೆ ಬೇಕು. ಆದರೆ ರೀಲ್ಸ್ ಕೆಲವೇ ಕ್ಷಣಗಳಲ್ಲಿ ಮನರಂಜನೆ, ಮಾಹಿತಿ ಅಥವಾ ಹೊಸತನವನ್ನು ನೀಡುತ್ತದೆ. ಒಂದು ವಿಡಿಯೊ ಮುಗಿದ ತಕ್ಷಣ ಮತ್ತೊಂದು ವಿಡಿಯೊ ಸಿದ್ಧವಾಗಿರುವುದರಿಂದ, "ಇನ್ನೊಂದು ಮಾತ್ರ ನೋಡೋಣ" ಎಂಬ ಕುತೂಹಲ ನಿರಂತರವಾಗಿ ಮುಂದುವರಿಯುತ್ತದೆ. ಇದೇ ರೀಲ್ಸ್‌ನ ದೊಡ್ಡ ಆಕರ್ಷಣೆ; ಕೆಲವೊಮ್ಮೆ ಇದೇ ಅದರ ದೊಡ್ಡ ಸವಾಲೂ ಆಗುತ್ತದೆ. ಅಲ್ಲದೆ, ಹಿಂದೆ ತಮ್ಮ ಪ್ರತಿಭೆಯನ್ನು ಜಗತ್ತಿಗೆ ತೋರಿಸಲು ದೊಡ್ಡ ವೇದಿಕೆಗಳು ಬೇಕಾಗುತ್ತಿತ್ತು. ಇಂದು ಒಬ್ಬ ಸಾಮಾನ್ಯ ವ್ಯಕ್ತಿಯೂ ತನ್ನಲ್ಲಿರುವ ನಟನೆ, ನೃತ್ಯ, ಹಾಡುಗಾರಿಕೆ, ಅಡುಗೆ, ಚಿತ್ರಕಲೆ ಅಥವಾ ಯಾವುದೇ ಸುಪ್ತ ಪ್ರತಿಭೆಯನ್ನು ಸಾಮಾಜಿಕ ಜಾಲತಾಣದ ಮೂಲಕ ಸಾವಿರಾರು ಜನರಿಗೆ ತಲುಪಿಸಬಹುದು. ಪ್ರತಿಭೆ ಮತ್ತು ಸೃಜನಶೀಲತೆ ಇದ್ದರೆ, ಸಾಮಾನ್ಯ ವ್ಯಕ್ತಿಯೂ ಜನರ ಗಮನ ಸೆಳೆಯುವ ಅವಕಾಶವನ್ನು ಪಡೆಯುತ್ತಿದ್ದಾನೆ.

ಮನರಂಜನೆಯಷ್ಟೇ ಅಲ್ಲ, ಉದ್ಯೋಗ ಮತ್ತು ವ್ಯಾಪಾರಕ್ಕೂ ಹೊಸ ದಾರಿ ರೀಲ್ಸ್ ಅನ್ನು ಕೇವಲ ಮನರಂಜನೆಯ ಮಾಧ್ಯಮವೆಂದು ನೋಡುವುದು ಸರಿಯಲ್ಲ. ಇದು ಇಂದು ಅನೇಕ ಮಂದಿಗೆ ಉದ್ಯೋಗ, ಆದಾಯ ಮತ್ತು ವ್ಯಾಪಾರದ ಹೊಸ ಅವಕಾಶಗಳನ್ನು ತೆರೆದಿದೆ. ಅನೇಕ ಯುವಕ-ಯುವತಿಯರು ಕಂಟೆಂಟ್ ಕ್ರಿಯೇಟರ್‌ಗಳಾಗಿ ತಮ್ಮದೇ ಆದ ಗುರುತನ್ನು ನಿರ್ಮಿಸಿಕೊಂಡಿದ್ದಾರೆ. ವಿವಿಧ ಉತ್ಪನ್ನಗಳ ಪ್ರಚಾರ, ಬ್ರ್ಯಾಂಡ್ ಸಹಯೋಗ ಮತ್ತು ಡಿಜಿಟಲ್ ಮಾಧ್ಯಮಗಳ ಮೂಲಕ ಆದಾಯ ಗಳಿಸುತ್ತಿದ್ದಾರೆ. ಸಣ್ಣ ಉದ್ಯಮಿಗಳಿಗೂ ರೀಲ್ಸ್ ಹೊಸ ಆಸರೆಯಾಗಿದೆ. ಸೀರೆ ವ್ಯಾಪಾರಿಗಳು, ಮನೆಮದ್ದು ತಯಾರಕರು, ಹೋಟೆಲ್ ಮಾಲೀಕರು, ಕರಕುಶಲ ಕಲಾವಿದರು ಮತ್ತು ಸಣ್ಣ ವ್ಯಾಪಾರಿಗಳು ತಮ್ಮ ಉತ್ಪನ್ನಗಳನ್ನು ಕಿರು ವಿಡಿಯೊಗಳ ಮೂಲಕ ಜನರಿಗೆ ತಲುಪಿಸುತ್ತಿದ್ದಾರೆ. ದುಬಾರಿ ಜಾಹೀರಾತಿಗೆ ಸಾಧ್ಯವಾಗದ ಪ್ರಚಾರವನ್ನು ಕೆಲವೊಮ್ಮೆ ಮೊಬೈಲ್‌ನಲ್ಲೇ ಸೃಜನಶೀಲವಾಗಿ ಮಾಡಿಕೊಳ್ಳುವ ಅವಕಾಶ ಅವರಿಗೆ ಸಿಕ್ಕಿದೆ. ಮಾಹಿತಿಯ ಪ್ರಸಾರಕ್ಕೂ ಉಪಯುಕ್ತ ವೇದಿಕೆ ಇದಾಗಿದೆ .

ರೀಲ್ಸ್ ಎಂದರೆ ಕೇವಲ ನೃತ್ಯ, ಹಾಡು ಅಥವಾ ಹಾಸ್ಯವಲ್ಲ. ಇಂದು ಶಿಕ್ಷಣ, ಸ್ಪರ್ಧಾತ್ಮಕ ಪರೀಕ್ಷೆಗಳ ಮಾಹಿತಿ, ಕೃಷಿ, ಆರೋಗ್ಯ ಜಾಗೃತಿ, ಕಾನೂನು ಅರಿವು, ಕರಕುಶಲ ಕಲೆಗಳು ಮತ್ತು ವಿವಿಧ ಕೌಶಲ್ಯಗಳನ್ನು ಕಲಿಸುವ ಅನೇಕ ಉಪಯುಕ್ತ ಕಿರು ವಿಡಿಯೊಗಳೂ ಲಭ್ಯವಿವೆ. ವೈದ್ಯರು ಆರೋಗ್ಯದ ಬಗ್ಗೆ ಅರಿವು ಮೂಡಿಸುತ್ತಿದ್ದಾರೆ. ಶಿಕ್ಷಕರು ಕಷ್ಟವಾದ ವಿಷಯಗಳನ್ನು ಸರಳವಾಗಿ ತಿಳಿಸುತ್ತಿದ್ದಾರೆ. ರೈತರು ತಮ್ಮ ಅನುಭವಗಳನ್ನು ಹಂಚಿಕೊಳ್ಳುತ್ತಿದ್ದಾರೆ. ಕಲಾವಿದರು ತಮ್ಮ ಕಲೆಯನ್ನು ಯುವಪೀಳಿಗೆಗೆ ತಲುಪಿಸುತ್ತಿದ್ದಾರೆ. ಹೀಗಾಗಿ ರೀಲ್ಸ್ ಒಂದು ಸಾಧನ. ಅದನ್ನು ಹೇಗೆ ಬಳಸುತ್ತೇವೆ ಎಂಬುದರ ಮೇಲೆ ಅದರ ಮೌಲ್ಯ ನಿರ್ಧಾರವಾಗುತ್ತದೆ.

ನಾಣ್ಯಕ್ಕೆ ಎರಡು ಮುಖಗಳಿರುವಂತೆ? ಪ್ರತಿಯೊಂದು ಹೊಸ ತಂತ್ರಜ್ಞಾನಕ್ಕೂ ಅದರ ಸಕಾರಾತ್ಮಕ ಮತ್ತು ಋಣಾತ್ಮಕ ಮುಖಗಳಿರುತ್ತವೆ. ರೀಲ್ಸ್ ಸಂಸ್ಕೃತಿಯೂ ಇದಕ್ಕೆ ಹೊರತಲ್ಲ. ಅತ್ಯಂತ ದೊಡ್ಡ ಸಮಸ್ಯೆಯೆಂದರೆ ಸಮಯದ ಅರಿವಿಲ್ಲದೆ ನಿರಂತರವಾಗಿ ಸ್ಕ್ರಾಲ್ ಮಾಡುವುದು. "ಒಂದು ರೀಲ್ಸ್ ಮಾತ್ರ" ಎಂದು ಆರಂಭವಾದುದು ಗಂಟೆಗಟ್ಟಲೆ ಮುಂದುವರಿಯಬಹುದು. ವಿದ್ಯಾರ್ಥಿಗಳ ಓದು, ಕೆಲಸದ ಏಕಾಗ್ರತೆ ಮತ್ತು ಕುಟುಂಬದೊಂದಿಗೆ ಕಳೆಯಬೇಕಾದ ಸಮಯವೂ ಇದರಿಂದ ಕಡಿಮೆಯಾಗುವ ಸಾಧ್ಯತೆ ಇದೆ.

ಇನ್ನೊಂದು ಸವಾಲು ಹೋಲಿಕೆಯ ಮನೋಭಾವ. ಸಾಮಾಜಿಕ ಜಾಲತಾಣಗಳಲ್ಲಿ ಹೆಚ್ಚಾಗಿ ಇತರರ ಜೀವನದ ಸುಂದರ ಕ್ಷಣಗಳೇ ಕಾಣಿಸುತ್ತವೆ. ಅದನ್ನೇ







ಸಂಪೂರ್ಣ ಜೀವನವೆಂದು ಭಾವಿಸಿ, ತಮ್ಮ ಬದುಕಿನೊಂದಿಗೆ ಹೋಲಿಕೆ ಮಾಡಿಕೊಳ್ಳುವುದು ಅತೃಪ್ತಿಗೆ ಕಾರಣವಾಗಬಹುದು. ಲೈಕ್ಸ್ ಮತ್ತು ವೀಕ್ಷಣೆಗಳ ಹಿಂದೆ ಓಡುವ ಮನಸ್ಥಿತಿ ಹೆಚ್ಚುತ್ತಿದೆ. ಇಂದು ಕೆಲವರಿಗೆ ತಮ್ಮ ಪ್ರತಿಭೆಗಿಂತ ವಿಡಿಯೊಗೆ ಎಷ್ಟು ವೀಕ್ಷಣೆ ಸಿಕ್ಕಿತು, ಎಷ್ಟು ಲೈಕ್ಸ್ ಬಂದವು ಎಂಬುದೇ ಮುಖ್ಯವಾಗುತ್ತಿದೆ. ನಿರೀಕ್ಷಿಸಿದಷ್ಟು ಜನಪ್ರಿಯತೆ ಸಿಗದಿದ್ದಾಗ ನಿರಾಸೆ ಉಂಟಾಗಬಹುದು. ಆದರೆ ಒಂದು ವಿಡಿಯೊದ ವೀಕ್ಷಣೆ ಅಥವಾ ಲೈಕ್ಸ್‌ನ ಸಂಖ್ಯೆ ಮನುಷ್ಯನ ಪ್ರತಿಭೆ ಅಥವಾ ವ್ಯಕ್ತಿತ್ವವನ್ನು ಅಳೆಯುವ ಮಾನದಂಡವಲ್ಲ ಎಂಬುದನ್ನು ಯುವಪೀಳಿಗೆ ಅರಿಯಬೇಕು. ಪರದೆಯ ಮೇಲಿನ ಜನಪ್ರಿಯತೆ ಕ್ಷಣಿಕವಾಗಬಹುದು; ನಿಜವಾದ ಸಾಧನೆಗೆ ನಿರಂತರ ಶ್ರಮ ಮತ್ತು ಗುಣಮಟ್ಟ ಅಗತ್ಯ. "ಹೆಚ್ಚು ಜನ ನೋಡಬೇಕು", "ವೈರಲ್ ಆಗಬೇಕು" ಎಂಬ ಹಪಾಹಪಿಯಲ್ಲಿ ಕೆಲವರು ಸುರಕ್ಷತೆಯನ್ನೇ ಮರೆತು ಅಪಾಯಕಾರಿ ಸ್ಥಳಗಳಲ್ಲಿ ವಿಡಿಯೊ ಮಾಡಲು ಮುಂದಾಗುತ್ತಾರೆ. ಇದು ಮನರಂಜನೆಯ ಮಿತಿಯನ್ನು ಮೀರಿ ಅಪಾಯಕ್ಕೆ ದಾರಿ ಮಾಡಿಕೊಡಬಹುದು. ಜನಪ್ರಿಯತೆಗಾಗಿ ಯಾವುದೇ ಸಾಹಸಕ್ಕೆ ಮುಂದಾಗುವ ಮೊದಲು, ಒಂದು ಕ್ಷಣದ ವಿಡಿಯೊಗಿಂತ ನಮ್ಮ ಸುರಕ್ಷತೆ ಮತ್ತು ಬದುಕು ಬಹಳ ಮುಖ್ಯ ಎಂಬ ಅರಿವು ಇರಬೇಕು. ಸಾಮಾಜಿಕ ಜಾಲತಾಣದ ಮೆಚ್ಚುಗೆಗಾಗಿ ನಮ್ಮ ವಿವೇಕವನ್ನು ಕಳೆದುಕೊಳ್ಳಬಾರದು.

ರೀಲ್ಸ್?ವರವೋ,ಶಾಪವೋ?

ಈ ಪ್ರಶ್ನೆಗೆ ಒಂದೇ ಉತ್ತರ ನೀಡಲು ಸಾಧ್ಯವಿಲ್ಲ. ಏಕೆಂದರೆ ರೀಲ್ಸ್ ಸ್ವತಃ ವರವೂ ಅಲ್ಲ, ಶಾಪವೂ ಅಲ್ಲ. ಅದು ನಮ್ಮ ಕೈಯಲ್ಲಿರುವ ಒಂದು ತಂತ್ರಜ್ಞಾನದ ಸಾಧನ. ಜ್ಞಾನಾರ್ಜನೆಗೆ ಬಳಸಿದರೆ ಅದು ಕಲಿಕೆಯ ವೇದಿಕೆ. ಪ್ರತಿಭೆ ಪ್ರದರ್ಶಿಸಲು ಬಳಸಿದರೆ ಅವಕಾಶದ ಬಾಗಿಲು. ವ್ಯಾಪಾರಕ್ಕೆ ಬಳಸಿದರೆ ಆದಾಯದ ಮಾರ್ಗ. ಆದರೆ ಸಮಯವನ್ನು ಸಂಪೂರ್ಣವಾಗಿ ನುಂಗುವ ವ್ಯಾಮೋಹವಾಗಿ ಬದಲಾದರೆ ಅದು ನಮ್ಮ ಬದುಕಿನ ಸಮತೋಲನಕ್ಕೆ ಸವಾಲಾಗಬಹುದು.

ತಂತ್ರಜ್ಞಾನ ಎಂದಿಗೂ ನಮ್ಮ ಶತ್ರುವಲ್ಲ; ಅದನ್ನು ನಾವು ಹೇಗೆ ಬಳಸುತ್ತೇವೆ ಎಂಬುದೇ ಅದರ ಪರಿಣಾಮವನ್ನು ನಿರ್ಧರಿಸುತ್ತದೆ. ರೀಲ್ಸ್ ನಮ್ಮ ಸಮಯವನ್ನು ಕಸಿಯುವ ಸಾಧನವಾಗಬೇಕೋ, ನಮ್ಮ ಪ್ರತಿಭೆಯನ್ನು ಜಗತ್ತಿಗೆ ಪರಿಚಯಿಸುವ ವೇದಿಕೆಯಾಗಬೇಕೋ ಎಂಬ ಆಯ್ಕೆ ನಮ್ಮ ಕೈಯಲ್ಲಿದೆ. ಯುವಪೀಳಿಗೆ ಇದರ ಮಿತಿಯನ್ನು ಅರಿತು, ಮನರಂಜನೆಯ ಜೊತೆಗೆ ಜ್ಞಾನ, ಕೌಶಲ್ಯ ಮತ್ತು ಸೃಜನಶೀಲತೆಗೂ ಆದ್ಯತೆ ನೀಡಿದಾಗ ಈ ಡಿಜಿಟಲ್ ಮಾಧ್ಯಮ ಸಮಾಜಕ್ಕೆ ನಿಜವಾದ ಪ್ರಯೋಜನವನ್ನು ನೀಡಬಲ್ಲದು. ಕೆಲವೇ ಸೆಕೆಂಡುಗಳ ರೀಲ್ಸ್ ನಮ್ಮ ಗಮನವನ್ನು ಸೆಳೆಯಬಹುದು; ಆದರೆ ನಮ್ಮ ಭವಿಷ್ಯವನ್ನು ರೂಪಿಸುವುದು ನಾವು ಆ ಕೆಲವೇ ಸೆಕೆಂಡುಗಳ ನಂತರ ಏನು ಮಾಡುತ್ತೇವೆ ಎಂಬುದೇ ಮುಖ್ಯವಾಗುತ್ತದೆ.



ಡಾ.ರೇಖಾ ಉದಯ

# ಅಂಕಣ ಕಂ–ಕಣ...

## ಓದು: ಅಕ್ಷರಗಳಿಂದ ಆತ್ಮವಿಕಾಸದತ್ತ ಪಯಣ

**ಓದು ಎಂದರೇನು? ಪುಸ್ತಕವನ್ನು ಕೈಗೆತ್ತಿಕೊಂಡು ಪುಟಗಳನ್ನು ತಿರುವುವುದೇ? ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಗಳಿಸಲು ಪಾಠವನ್ನು ಕಂಠಪಾಠ ಮಾಡಿಕೊಳ್ಳುವುದೇ? ಖಂಡಿತವಾಗಿಯೂ ಅಲ್ಲ. ಓದು ಎಂಬುದು ಅಕ್ಷರಗಳ ಲೋಕವನ್ನು ದಾಟಿ ಅರಿವಿನ ಬೆಳಕಿನತ್ತ ನಮ್ಮನ್ನು ಕರೆದೊಯ್ಯುವ ನಿರಂತರ ಪ್ರಕ್ರಿಯೆ. ಅದು ಕೇವಲ ಮಾಹಿತಿಯನ್ನು ಸಂಗ್ರಹಿಸುವ ಕ್ರಿಯೆಯಲ್ಲ; ಬದಲಾಗಿ ನಮ್ಮ ಚಿಂತನೆ, ವ್ಯಕ್ತಿತ್ವ, ಸಂವೇದನೆ ಮತ್ತು ಬದುಕಿನ ದೃಷ್ಟಿಕೋನವನ್ನು ರೂಪಿಸುವ ಶಕ್ತಿಯಾಗಿದೆ.**

ಮಾನವನು ಹುಟ್ಟುವಾಗ ಖಾಲಿ ಫಲಕದಂತಿರುತ್ತಾನೆ. ಅವನ ಅನುಭವಗಳು, ಶಿಕ್ಷಣ ಮತ್ತು ಓದು ಆ ಫಲಕದ ಮೇಲೆ ಜೀವನದ ಚಿತ್ರವನ್ನು ಮೂಡಿಸುತ್ತವೆ. ಒಬ್ಬ ವ್ಯಕ್ತಿಯ ಮಾತು, ಆಲೋಚನೆ, ನಿರ್ಧಾರ ಮತ್ತು ವರ್ತನೆಯ ಹಿಂದೆ ಅವನ ಓದಿನ ಪ್ರಭಾವ ಅಡಗಿರುತ್ತದೆ. ಅದಕ್ಕಾಗಿಯೇ ಓದು ಮನುಷ್ಯನನ್ನು ಕೇವಲ ಜ್ಞಾನವಂತನನ್ನಾಗಿ ಮಾತ್ರವಲ್ಲ, ಪ್ರಬುದ್ಧ ಮತ್ತು ಪ್ರಜ್ಞಾವಂತ ವ್ಯಕ್ತಿಯಾಗಿಯೂ ರೂಪಿಸುತ್ತದೆ.

ಓದು ನಮ್ಮ ಅಂತರಂಗದ ಬಾಗಿಲು ತೆರೆದು ನಾವು ನೋಡದ ಜಗತ್ತನ್ನು ಪರಿಚಯಿಸುತ್ತದೆ. ವಿವಿಧ ಸಂಸ್ಕೃತಿಗಳು, ಜೀವನ ಮೌಲ್ಯಗಳು, ಅನುಭವಗಳು ಮತ್ತು ವೈವಿಧ್ಯಮಯ ಚಿಂತನೆಗಳೊಂದಿಗೆ ಪುಸ್ತಕಗಳ ಮೂಲಕ ನಾವು ಹಲವು ಕಾಲಘಟ್ಟಗಳಲ್ಲಿ ಸಂಚರಿಸುತ್ತೇವೆ, ಅನೇಕ ವ್ಯಕ್ತಿಗಳನ್ನು ಭೇಟಿಯಾಗುತ್ತೇವೆ ಮತ್ತು ನಮ್ಮ ಅನುಭವದ ಮಿತಿಯನ್ನು ವಿಸ್ತರಿಸಿಕೊಳ್ಳುತ್ತೇವೆ. ಈ ಕಾರಣಕ್ಕಾಗಿಯೇ ಓದನ್ನು ಬದುಕಿನ ಅತ್ಯುತ್ತಮ ಸ್ನೇಹಿತ ಎಂದು ಕರೆಯಲಾಗುತ್ತದೆ.

ಆದರೆ, ಓದುವಿಕೆ ಅರ್ಥಪೂರ್ಣವಾಗಬೇಕಾದರೆ ಅದರಲ್ಲಿ ಕುತೂಹಲವಿರಬೇಕು. ಏನನ್ನಾದರೂ ತಿಳಿಯಬೇಕು, ಹೊಸ ವಿಚಾರಗಳನ್ನು ಕಲಿಯಬೇಕು, ಬದುಕಿನ ಬಗ್ಗೆ ಹೆಚ್ಚು ಅರ್ಥಮಾಡಿಕೊಳ್ಳಬೇಕು ಎಂಬ ಹಂಬಲವೇ ಓದಿನ ನಿಜವಾದ ಪ್ರೇರಕ ಶಕ್ತಿ. ಕುತೂಹಲವಿಲ್ಲದ ಓದು ಯಾಂತ್ರಿಕ ಕ್ರಿಯೆಯಾಗಿ ಉಳಿಯುತ್ತದೆ. ಆದರೆ ಪ್ರಶ್ನಿಸುವ, ತಿಳಿಯುವ ಮತ್ತು ಅನ್ವೇಷಿಸುವ ಮನಸ್ಸಿನಿಂದ ಕೂಡಿದ ಓದು ನಮ್ಮ ಬುದ್ಧಿಶಕ್ತಿಯನ್ನು ಜಾಗೃತಗೊಳಿಸುತ್ತದೆ. "ಏಕೆ?", "ಹೇಗೆ?", "ಯಾಕಾಗಿ?" ಎಂಬ ಪ್ರಶ್ನೆಗಳನ್ನು ಕೇಳುವ ಅಭ್ಯಾಸ ಓದನ್ನು ಇನ್ನಷ್ಟು ಆಳವಾಗಿಸುತ್ತದೆ.

ಅರ್ಥಗ್ರಹಿಕೆಯಿಲ್ಲದ ಓದು ಹೆಚ್ಚು ಕಾಲ ನೆನಪಿನಲ್ಲಿ ಉಳಿಯುವುದಿಲ್ಲ. ಕಣ್ಣುಗಳು ಪದಗಳನ್ನು ಓದಿದರೂ ಮನಸ್ಸು ಅವುಗಳನ್ನು ಗ್ರಹಿಸದಿದ್ದರೆ ಓದಿನ ಉದ್ದೇಶವೇ ನಷ್ಟವಾಗುತ್ತದೆ. ಆದ್ದರಿಂದ ಯಾವುದಾದರೂ ವಿಷಯವನ್ನು ಓದುವಾಗ ಅದರ ಮುಖ್ಯ ವಿಚಾರಗಳು ಯಾವುವು, ಅದರ ಹಿನ್ನೆಲೆ ಏನು ಮತ್ತು ಅದು ನಮ್ಮ ಜೀವನಕ್ಕೆ ಹೇಗೆ ಸಂಬಂಧಿಸುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಬೇಕು. ಅರ್ಥೈಸುತ್ತಾ ಓದುವುದು, ವಿಚಾರಿಸುತ್ತಾ ಓದುವುದು ಮತ್ತು ಮನಸ್ಸಿಟ್ಟು ಓದುವುದು ನಿಜವಾದ ಓದುವಿಕೆಯ ಲಕ್ಷಣವಾಗಿದೆ.

### ಅಂಕಣ: ಶೈಕ್ಷಣಿಕ ದಾಹ

ಓದುವಿಕೆಯೊಂದಿಗೆ ಭಾಷಾ ಸಾಮರ್ಥ್ಯವೂ ವೃದ್ಧಿಯಾಗುತ್ತದೆ. ಓದುವಾಗ ಅರ್ಥವಾಗದ ಪದಗಳನ್ನು ಕಡೆಗಣಿಸದೆ ಅವುಗಳ ಅರ್ಥವನ್ನು ತಿಳಿದುಕೊಳ್ಳುವ ಅಭ್ಯಾಸ ರೂಢಿಸಿಕೊಳ್ಳಬೇಕು. ನಿಘಂಟಿನ ಸಹಾಯ ಪಡೆಯುವುದು ಅಥವಾ ಇತರ ಮೂಲಗಳಿಂದ ತಿಳಿದುಕೊಳ್ಳುವುದು ನಮ್ಮ ಭಾಷಾ ಬೆಳವಣಿಗೆಗೆ ಪೂರಕವಾಗುತ್ತದೆ. ಭಾಷೆ ಸಮೃದ್ಧವಾದಷ್ಟೂ ನಮ್ಮ ಚಿಂತನೆ ಮತ್ತು ಅಭಿವ್ಯಕ್ತಿಯ ಸಾಮರ್ಥ್ಯವೂ ವಿಸ್ತಾರಗೊಳ್ಳುತ್ತದೆ.

ಓದಿನ ಪರಿಣಾಮಕಾರಿತ್ವವನ್ನು ಹೆಚ್ಚಿಸುವ ಮತ್ತೊಂದು ಉತ್ತಮ ಅಭ್ಯಾಸವೆಂದರೆ ಟಿಪ್ಪಣಿ ಮಾಡಿಕೊಳ್ಳುವುದು. ಓದುವಾಗ ಪ್ರಮುಖ ಅಂಶಗಳನ್ನು ಗುರುತಿಸಿ ಸಂಕ್ಷಿಪ್ತವಾಗಿ ಬರೆದುಕೊಳ್ಳುವುದರಿಂದ ವಿಷಯವನ್ನು ಮತ್ತೆ ನೆನಪಿಸಿಕೊಳ್ಳುವುದು ಸುಲಭವಾಗುತ್ತದೆ. ಇಲ್ಲಿ ಮುಖ್ಯ ವಿಚಾರಗಳನ್ನು ಮಾತ್ರ ದಾಖಲಿಸಿಕೊಳ್ಳಬೇಕು. ಎಲ್ಲವನ್ನೂ ಬರೆದುಕೊಳ್ಳುವ ಪ್ರಯತ್ನ ಮಾಡಿದರೆ ಅದು ಓದಿನ ಗುರಿಯನ್ನೇ ಮರೆಮಾಡಬಹುದು. ಸರಳ ಮತ್ತು ಅರ್ಥಪೂರ್ಣ ಟಿಪ್ಪಣಿಗಳು ನಮ್ಮ ಅಧ್ಯಯನವನ್ನು ಹೆಚ್ಚು ವ್ಯವಸ್ಥಿತವಾಗಿಸುತ್ತವೆ.



ಓದಿದ ವಿಷಯವನ್ನು ಮನನ ಮಾಡಿಕೊಳ್ಳುವುದೂ ಅಷ್ಟೇ ಮುಖ್ಯ. ಅನೇಕರು ಓದಿ ಮುಗಿಸಿದ ತಕ್ಷಣ ಪುಸ್ತಕವನ್ನು ಮುಚ್ಚಿ ಬೇರೆ ಕೆಲಸದಲ್ಲಿ ತೊಡಗುತ್ತಾರೆ. ಆದರೆ ಓದಿದ ವಿಷಯವನ್ನು ಸ್ವಲ್ಪ ಸಮಯ ನೆನಪಿಸಿಕೊಳ್ಳುವುದು, ನಮ್ಮಷ್ಟಕ್ಕೆ ನಾವು ಪ್ರಶ್ನೆಗಳನ್ನು ಕೇಳಿಕೊಳ್ಳುವುದು ಮತ್ತು ಓದಿದ ವಿಚಾರಗಳನ್ನು ಮನಸ್ಸಿನಲ್ಲಿ ಮೆಲುಕುಹಾಕುವುದು ಅಗತ್ಯ. ಇದರಿಂದ ಎಷ್ಟು ವಿಷಯ ಅರ್ಥವಾಗಿದೆ, ಯಾವ ಅಂಶಗಳು ನೆನಪಿನಲ್ಲಿ ಉಳಿದಿವೆ ಮತ್ತು ಯಾವ ಭಾಗಗಳನ್ನು ಮತ್ತೆ ಓದಬೇಕಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಮನನವು ಓದನ್ನು ಕೇವಲ ತಾತ್ಕಾಲಿಕ ಮಾಹಿತಿಯಿಂದ ಶಾಶ್ವತ ಅರಿವಿನತ್ತ ಕೊಂಡೊಯ್ಯುತ್ತದೆ.

ಯಾವುದೇ ಪಠ್ಯವನ್ನು ಮೊದಲಿಗೆ ಒಮ್ಮೆ ಸಂಪೂರ್ಣವಾಗಿ ಓದಿಕೊಳ್ಳುವುದು ಉತ್ತಮ. ಇದರಿಂದ ಅದರ ಸಮಗ್ರ ಚಿತ್ರಣ ನಮ್ಮ ಮನಸ್ಸಿನಲ್ಲಿ ಮೂಡುತ್ತದೆ. ನಂತರ ಅದನ್ನು ಸಣ್ಣ ಭಾಗಗಳಾಗಿ ವಿಂಗಡಿಸಿಕೊಂಡು ಅಧ್ಯಯನ ಮಾಡಿದರೆ ವಿಷಯದ ಆಳವನ್ನು ಸುಲಭವಾಗಿ ಗ್ರಹಿಸಲು ಸಾಧ್ಯವಾಗುತ್ತದೆ. ಒಂದು ಮನೆಯ ನಕ್ಷೆ ಹೇಗೆ ಅದರ ನಿರ್ಮಾಣವನ್ನು ಸುಲಭಗೊಳಿಸುತ್ತದೆಯೋ, ಹಾಗೆಯೇ ವಿಷಯದ ಸಮಗ್ರ ಕಲ್ಪನೆ ಅದರ ಆಳವಾದ ಅಧ್ಯಯನಕ್ಕೆ ನೆರವಾಗುತ್ತದೆ.

ಇಂದಿನ ಡಿಜಿಟಲ್ ಯುಗದಲ್ಲಿ ಮಾಹಿತಿಯ ಕೊರತೆ ಇಲ್ಲ. ಮೊಬೈಲ್ ಮತ್ತು ಅಂತರ್ಜಾಲದ ಮೂಲಕ ಅಪಾರ ಮಾಹಿತಿಗಳು ನಮ್ಮ ಬೆರಳ ತುದಿಯಲ್ಲಿವೆ. ಆದರೆ ಅದನ್ನು ಸರಿಯಾಗಿ ಅರ್ಥೈಸುವ ಮತ್ತು ವಿವೇಚಿಸುವ ಸಾಮರ್ಥ್ಯವೂ ಅಗತ್ಯ. ಓದು ಸತ್ಯ ಮತ್ತು ಸುಳ್ಳಿನ ನಡುವಿನ ವ್ಯತ್ಯಾಸವನ್ನು ಅರಿಯಲು, ಸರಿಯಾದ ನಿರ್ಧಾರಗಳನ್ನು ತೆಗೆದುಕೊಳ್ಳಲು ಮತ್ತು ವಿಮರ್ಶಾತ್ಮಕವಾಗಿ ಚಿಂತಿಸಲು ನೆರವಾಗುತ್ತದೆ.

ಒಟ್ಟಿನಲ್ಲಿ, ಓದು ಎಂದರೆ ಅಕ್ಷರಗಳನ್ನು ನೋಡುವ ಕ್ರಿಯೆಯಲ್ಲ; ಅದು ಬದುಕನ್ನು ಅರ್ಥಮಾಡಿಕೊಳ್ಳುವ ಸಾಧನ. ಓದು ಎಂದರೆ ಪರೀಕ್ಷೆಗಾಗಿ ಓದಿ ಮರೆತುಬಿಡುವ ಪಾಠವಲ್ಲ; ಅದು ಬದುಕಿನ ಪಯಣಕ್ಕೆ ಬೆಳಕು ನೀಡುವ ದೀಪ. ಪ್ರಾಮಾಣಿಕ ಅರ್ಥೈಸುವಿಕೆ ಮತ್ತು ಮನನದೊಡಗೂಡಿದ ಓದು ನಮ್ಮ ವ್ಯಕ್ತಿತ್ವವನ್ನು ರೂಪಿಸುವುದರ ಜೊತೆಗೆ ಕನಸುಗಳಿಗೆ ರೆಕ್ಕೆಗಳನ್ನು ಹಚ್ಚುತ್ತದೆ. ಆದ್ದರಿಂದ ಓದನ್ನು ಕೇವಲ ಅಭ್ಯಾಸವೆಂದು ಅಲ್ಲ, ಬದುಕಿನ ನಿರಂತರ ಧ್ಯಾನವೆಂದು ಸ್ವೀಕರಿಸೋಣ. ಏಕೆಂದರೆ, ಓದಿನ ಮೂಲಕವೇ ಮನುಷ್ಯನು ತನ್ನನ್ನು ತಾನು ಕಂಡುಕೊಳ್ಳುತ್ತಾನೆ, ತನ್ನ ಚಿಂತನೆಯ ಮಿತಿಗಳನ್ನು ಮೀರಿ ಬೆಳೆಯುತ್ತಾನೆ ಮತ್ತು ಬದುಕಿನ ನಿಜವಾದ ಅರ್ಥವನ್ನು ಅರಿತುಕೊಳ್ಳುತ್ತಾನೆ.



ಡಾ. ಮೈತ್ರಿ ಭಟ್, ವಿಟ್ಲ.

## ಬದುಕನ್ನು ಸುಂದರಗೊಳಿಸೋಣ

**ಸ್ವರ್ಗಕ್ಕೆ ಹೋಗಲು ಎಲ್ಲರೂ ಸಿದ್ಧರಿದ್ದರೂ ಸಾವು ಮಾತ್ರ ಬೇಡವಾಗಿದೆ. ಆದರೆ ಸಾವಿಲ್ಲದೇ ಸ್ವರ್ಗವಿಲ್ಲವೆಂಬ ಸತ್ಯ ಎಲ್ಲರಿಗೂ ಗೊತ್ತಿರುವ ವಿಷಯವೇ ಅಲ್ಲವೇ! ಆದರೂ ಹಿಂದಿನಿಂದಲೂ ಮನುಷ್ಯನ ಮನಸ್ಸಿನಲ್ಲಿ ಸ್ವರ್ಗ ಮತ್ತು ನರಕದ ಬಗ್ಗೆ ಯೋಚನೆಗಳು ಚಾಲ್ತಿಯಲ್ಲಿವೆ.**

ಆದರೆ ಅದಕ್ಕೆ ಸಮಂಜಸವಾದ ಉತ್ತರ ಇನ್ನೂವರೆಗೆ ದೊರೆತಿಲ್ಲ. ಆದರೂ ನಾವು ಪುನರ್ಜನ್ಮ, ಸ್ವರ್ಗ, ನರಕಗಳನ್ನು ಆಗಾಗ ನೆನಪಿಸಿಕೊಳ್ಳುತ್ತೇವೆ. ಜಗತ್ತಿನ ಎಲ್ಲಾ ಧರ್ಮಗಳು ಪುನರ್ಜನ್ಮದ ಬಗ್ಗೆ ಹೇಳಿವೆ. ಇಂದು ಹೇಳುತ್ತಿವೆ. ಎಲ್ಲಾ ಧರ್ಮ ಗುರುಗಳು ಸಹ ಪುನರ್ಜನ್ಮದ ಬಗ್ಗೆ ಹೇಳುತ್ತಾರೆ. ಆದರೆ ಯಾರೂ ಅದನ್ನು ನೋಡಿಲ್ಲ. ಅನುಭವಿಸಿಲ್ಲ.

ಹಿಂದಿನ ಜನ್ಮ, ಮುಂದಿನ ಜನ್ಮಗಳನ್ನು ಬದಿಗಿರಿಸಿ, ಇಂದಿನ ಜನ್ಮ, ಅಂದರೆ ಇರುವುದೊಂದು ಬದುಕನ್ನು ಸುಂದರಗೊಳಿಸಲು ಪ್ರಯತ್ನ ಮಾಡಿದರೆ ಒಳಿತು. ಒಂದಿಷ್ಟು ಜೀವನದಲ್ಲಿ ಬದಲಾವಣೆ ಮಾಡಿಕೊಂಡರೆ ಸಾಕು, ಬಾಳು ಬಂಗಾರವಾದೀತು. ಎಲ್ಲದಕ್ಕೂ ಮೊದಲು ನಮ್ಮ ಮನಸ್ಥಿತಿ ಬದಲಾಗಬೇಕು. ನಮಗಿರುವ ಈ ಬದುಕು ಸುಂದರಗೊಳಿಸಲಾರದಷ್ಟು ಕೆಟ್ಟದಾಗಿಲ್ಲ. ಕೆಳಗಿನ ಒಂದಿಷ್ಟು ಸಲಹೆಗಳನ್ನು ಪಾಲಿಸಿದರೆ ಸಾಕು ಬದಲಾದೀತು ಬಾಳು.

*ಸರಳವಾದ ಬದುಕು: ಇಲ್ಲದನ್ನು ಕಲ್ಪಿಸಿಕೊಳ್ಳುವುದು, ಸಾಧಿಸಲಾರದ ಗುರಿಗಳು, ಈಡೇರದ ಕನಸುಗಳ ಬೆನ್ನಟ್ಟಿ ನೆಮ್ಮದಿ ಹಾಳು ಮಾಡಿಕೊಳ್ಳದೇ, ಹಾಸಿಗೆ ಇದ್ದಷ್ಟು ಕಾಲುಚಾಚುವ ಗುಣ ಬೆಳಸಿಕೊಂಡರೆ ಒಳ್ಳೆಯದು. ಇಲ್ಲದೇ ಹೋದರೆ ನಾವು ಸಾಲ ಸೂಲ ಮಾಡಿ ಜೀವನ ನರಕ ಮಾಡಿಕೊಳ್ಳುತ್ತೇವೆ.

*ಮತ್ತೊಬ್ಬರೊಡನೆ ಹೋಲಿಸಿಕೊಳ್ಳದೇ ಇರುವುದು: ನಮಗಿರುವ ಸುಂದರವಾದ ಬದುಕನ್ನು ಮತ್ತೊಬ್ಬರೊಡನೆ ಹೋಲಿಸಿಕೊಂಡು ಹಾಳುಮಾಡಿಕೊಳ್ಳದೇ, ನಮ್ಮ ಇತಿಮಿತಿಗಳನ್ನು ತಿಳಿದುಕೊಂಡು ಜೀವನ ನಡೆಸಿದರೆ ನಾವು ಮತ್ತಷ್ಟು ನಮ್ಮ ಬದುಕನ್ನು ಸುಂದರ ಮಾಡಿಕೊಳ್ಳಬಹುದು. ನಾವು ಸಂಬಂಧಿಕರನ್ನು, ಪಕ್ಕದ ಮನೆಯವರನ್ನು, ಸಹೋದ್ಯೋಗಿಗಳನ್ನು, ಗೆಳೆಯರನ್ನು ನೋಡಿ ಅವರೊಡನೆ ನಮ್ಮನ್ನು ಹೋಲಿಸಿಕೊಂಡು ಕೊರಗುತ್ತೇವೆ. ಮತ್ತೊಬ್ಬರಿಗಿಂತ ಕಪ್ಪಾಗಿದ್ದರೆ, ದಪ್ಪಾಗಿದ್ದರೆ, ಗಿಡ್ಡಾಗಿದ್ದರೆ ಹೋಲಿಸಿಕೊಂಡು ಕೊರಗುವುದಕ್ಕಿಂತ ನಾವು ಇದ್ದಂತೆ ನಮ್ಮನ್ನು ಒಪ್ಪಿಕೊಂಡು ಬಿಟ್ಟರೆ ಆಯಿತು ಬದುಕು ಸುಂದರವಾಗುತ್ತದೆ.

*ಗಳಿಸುವ ಚಟಕ್ಕೆ ಬೀಳದೇ ಇರುವುದು: ಇಂದು ಕೆಲವೊಂದಿಷ್ಟು ಜನರು ಹಣಕ್ಕಾಗಿ ಮಾನವೀಯತೆಯನ್ನು ಮರೆತು ಬಿಟ್ಟಿರುತ್ತಾರೆ. ಹಣಕ್ಕಾಗಿ ಎಲ್ಲದಕ್ಕೂ ಸಿದ್ಧರಾಗಿ ಜನ ಮೋಸ, ವಂಚನೆ ಮಾಡುತ್ತಿದ್ದಾರೆ.

### ಅಂಕಣ: ಸಾಧನಾ ಪಥ

ಮನುಷ್ಯನಿಗೆ ಹಣ ಅವಶ್ಯಕವಾಗಿ ಬೇಕೇ ಬೇಕು, ಆದರೆ ಹಣ ಗಳಿಸುವ ಚಟಕ್ಕೆ ಬೀಳಬಾರದು. ಹಣ ಗಳಿಸಿದರೂ ಅದು ನ್ಯಾಯಮಾರ್ಗದಲ್ಲಿರಬೇಕು. ಹಣದಿಂದಲೇ ಇಂದು ಹೆಚ್ಚಿನ ಜಗಳ, ಮನಸ್ತಾಪಗಳು ಜರಗುತಿವೆ. ಆದರಿಂದ ಹಣ ಗಳಿಸುವ ಚಟವನ್ನು ಅಂಟಿಸಿಕೊಳ್ಳದೇ ಇರುವುದೇ ಒಳ್ಳೆಯದು.

*ತಾಳ್ಮೆಯನ್ನು ಕಳೆದುಕೊಳ್ಳದಿರುವುದು: ಒಂದು ನಿಮಿಷದ ಸಿಟ್ಟು ಎಂತಹ ಅವಗಡಕ್ಕೆ ಕಾರಣವಾಗಬಹುದು. ಅದಕ್ಕಾಗಿ ಒಂದಿಷ್ಟು ತಾಳ್ಮೆಯನ್ನು ಬೆಳೆಸಿಕೊಂಡರೆ ಸಾಕು, ಬಾಳಿನಲ್ಲಿ ಬರುವ ಎಷ್ಟೋ ಸಮಸ್ಯೆಗಳನ್ನು ಬರದಂತೆ ನೋಡಿಕೊಂಡು ಒಳ್ಳೆಯ ಬದುಕನ್ನು ಬದುಕಬಹುದು. ಆದರೆ ಇಂದು ಹೆಚ್ಚಿನ ಜನರು ತಾಳ್ಮೆಗೆಡುವುದರಿಂದಲೇ ಜೀವನ ನರಕ ಮಾಡಿಕೊಳ್ಳುತ್ತಿದ್ದಾರೆ.

**ಸಾಮಾಜಿಕ ಜಾಲತಾಣಗಳಿಂದ ದೂರವಿರುವುದು:** ಇಂದು ಸಮಾಜಿಕ ಜಾಲತಾಣಗಳಲ್ಲಿ ಕೆಟ್ಟದರ ಬಗ್ಗೆಯೇ ಚರ್ಚೆಗಳು, ವಾದಗಳು, ವಿವಾದಗಳು ಹೆಚ್ಚಾಗುತ್ತಿವೆ. ಅದರಲ್ಲಿ ಒಳ್ಳೆಯದು ಇದೆ, ಅದಕ್ಕಿಂತಲೂ ಹೆಚ್ಚಾಗಿ ಕೆಟ್ಟದ್ದೇ ಇದೆ. ಜೊತೆಗೆ ಅದೊಂದು ಚಟವಾಗಿ ಮಾರ್ಪಾಡುವಾಗುತ್ತಿದೆ. ಸಾಮಾಜಿಕ ಜಾಲತಾಣಗಳನ್ನು ಎಷ್ಟು ಬೇಕೋ ಅಷ್ಟೇ ಉಪಯೋಗಿಸಿದರೆ ಒಳ್ಳೆಯದು. ದಿನವಿಡಿ ಮೊಬೈಲ್ ಬಳಕೆಯಿಂದ ಇದ್ದ ನೆಮ್ಮದಿಯನ್ನು ಹಾಳಮಾಡಿಕೊಳ್ಳದೇ ಇರೋಣ.

*ಒಳ್ಳೆಯ ಹವ್ಯಾಸಗಳನ್ನು ಬೆಳೆಸಿಕೊಳ್ಳುವುದು: ಜೀವನ ಪೂರ್ತಿ ಕತ್ತೆಯ ದುಡಿತ ದುಡಿದು ನಿವೃತ್ತಿ ಜೀವನಕ್ಕೆ ಬರುವಷ್ಟರಲ್ಲಿ ಹತ್ತಾರು ರೋಗಗಳನ್ನು ಬೆಳೆಸಿಕೊಂಡು ಜೀವನ ಸ್ವಾದ ಕಳೆದುಕೊಂಡಿರುತ್ತೇವೆ. ಜೀವನದಲ್ಲಿ ನೆಮ್ಮದಿಗಾಗಿ ನಮಗೆ ಖುಷಿಕೊಡುವ ಹವ್ಯಾಸಗಳನ್ನು ಬೆಳೆಸಿಕೊಂಡರೆ



ಬಾಳನ್ನು ಸುಂದರಗೊಳಿಸಿಕೊಳ್ಳಬಹುದು. ಆದಷ್ಟು ಬೇಗನೆ ಬೆಳೆಸಿಕೊಂಡರೆ ಒಳ್ಳೆಯದು.

**ಅನುಮಾನಗಳನ್ನು ದೂರವಿಟ್ಟರೆ ಒಳ್ಳೆಯದು:** ಒಂದು ಸಣ್ಣ ಅನುಮಾನವೂ ಸಹ ಜೀವನದಲ್ಲಿ ದೊಡ್ಡದಾದ ಬಿರುಗಾಳಿಯನ್ನು ಎಬ್ಬಿಸಬಹುದು. ಒಂದು ಸುಂದರವಾದ ಕುಟುಂಬವನ್ನು ಹಾಳಮಾಡಬಹುದು. ಒಳ್ಳೆಯ ಗೆಳೆತನ ನೆಗದುಬಿದ್ದು ಹೋಗಬಹುದು. ಬದುಕನ್ನು ಸುಂದರಗೊಳಿಸಲು ಅನುಮಾನಗಳನ್ನು ಆದಷ್ಟು ಬೇಗನೆ ಪರಿಹರಿಸಿಕೊಳ್ಳುವುದು ಒಳ್ಳೆಯದು.

ಇರುವುದೊಂದು ಬದುಕನ್ನು ಸುಂದರಗೊಳಿಸಿಕೊಳ್ಳಬೇಕಾದರೆ ಇಲ್ಲದ ಸಮಸ್ಯೆಗಳನ್ನು ಮೈಮೇಲೆ ಎಳಿದುಕೊಳ್ಳದೆ, ನಾನೇ ಶ್ರೇಷ್ಠ ಎಂಬ ಅತಿಯಾದ ಅಹಂಕಾರವನ್ನು ಬೆಳೆಸಿಕೊಳ್ಳದೇ, ಜೀವನದಲ್ಲಿ ಆತ್ಮವಿಶ್ವಾಸವನ್ನು ಬೆಳಸಿಕೊಂಡು, ಕೀಳರಿಮೆಯನ್ನು ಹಿಮ್ಮೆಟಿಸಿ ನೋಡಿ ಬಾಳು ಬಂಗಾರವಾಗುತ್ತದೆ. ಹಿಂದಿನ ಜನ್ಮ, ಮುಂದಿನ ಜನ್ಮದ ಬಗ್ಗೆ ಯೋಚಿಸದೇ ನಮಗೆ ಗೊತ್ತಿರುವ ಇರುವುದೊಂದೆ ಈ ಜನ್ಮದಲ್ಲಿಯೇ ಖುಷಿ ಖುಷಿಯಾಗಿ ಬದುಕಿ, ಬಾಳನ್ನು ಸುಂದಗೊಳಿಸಿಕೊಳ್ಳೋಣ.



ಬಸವರಾಜ ಹೊನಗೌಡರ.

**ವಿದ್ಯಾ ಸ್ಪರ್ಧೆಯಲ್ಲಿ ಭಾಗವಹಿಸಿ ಅದರಿಂದ ಕಲಿತ ವಿಷಯವೇನೆಂದರೆ, ತಾನಿನ್ನು ಸಂಗೀತ ಕ್ಷೇತ್ರದಲ್ಲಿ ಬೆಟ್ಟದಷ್ಟು ಸಾಧನೆ ಮಾಡುವುದಿದೆ,ಎಲ್ಲಾ ವಿದ್ಯಾರ್ಥಿಗಳು ತಮ್ಮ ಓದಿನ ಜೊತೆಗೆ ತುಂಬಾ ಸಮಯವನ್ನು ಸಂಗೀತದ ಅಭ್ಯಾಸಕ್ಕೆ ವಿನಿಯೋಗಿಸುತ್ತಿದ್ದಾರೆ.**

ಅದರಂತೆಯೇ ನಾನು ಕೂಡ ಇನ್ನೂ ಹೆಚ್ಚಿನ ಅಭ್ಯಾಸವನ್ನು ಮಾಡಬೇಕಿದೆ,ಹಾಗೆಯೇ ದೊಡ್ಡ ದೊಡ್ಡ ಸಂಗೀತ ವಿದ್ವಾಂಸರ ಹಾಡುಗಾರಿಕೆಯನ್ನು ಕೇಳಿ ಅಭ್ಯಾಸವನ್ನು ಮಾಡಬೇಕು ಎಂದು ಮನದಲ್ಲಿಯೇ ನಿರ್ಧಾರ ಮಾಡಿಕೊಂಡಳು.

## ಗುರುವಿನ ಮಾರ್ಗದರ್ಶನ

ಈ ಮಧ್ಯೆ ವಿದ್ಯಾಳ ಸೀನಿಯರ್ ಪರೀಕ್ಷೆ ಕಟ್ಟುವ ದಿನ ಹತ್ತಿರ ಬಂದಿತು. ವಿದ್ಯಾಳ ಅಭ್ಯಾಸ ಕೂಡಾ ಹೆಚ್ಚಾಯಿತು.ಕುಳಿತರೆ ನಿಂತರೆ ಹಾಡುತ್ತಲೇ ಇರುತ್ತಿದ್ದಳು.ಕಾಲೇಜಿನ ಪಾಠಗಳ ಬಗ್ಗೆ ಅಷ್ಟೇನು ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ.ಆದರೆ ಪರೀಕ್ಷೆಯ ಸಮಯಕ್ಕೆ ಚೆನ್ನಾಗಿ ಓದಿಕೊಂಡು ಪರೀಕ್ಷೆ ಬರೆದು ಫಸ್ಟ್ ಕ್ಲಾಸ್ ಅಥವಾ ಸೆಕೆಂಡ್ ಕ್ಲಾಸ್ ನಲ್ಲಿ ಪಾಸಾಗುತ್ತಿದ್ದಳು.ಆದ್ದರಿಂದ ಅವಳ ಅಮ್ಮ ಅವಳ ಓದಿನ ಬಗ್ಗೆ ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ.

ಈಗ ವಿದ್ಯಾಳಿಗೆ ಸೀನಿಯರ್‌ಗೆ ಕಷ್ಟವಾದ ಪಾಠಗಳ ರೆಕಾರ್ಡಿಂಗ್ ಗುರುಗಳೇ

### ಅಂಕಣ: ಬದುಕಿನ ಬುತ್ತಿ

ಮಾಡಿಕೊಡುತ್ತಿದ್ದರು.ವಿದ್ಯಾ ಟೇಪ್ ರೆಕಾರ್ಡ್ ಹಾಕಿಕೊಂಡೇ ದಿನದ ಬಹುಪಾಲು ಕಳೆಯುತ್ತಿದ್ದಳು.ರಾಗಗಳ ಮನೋಧರ್ಮ ಮನಸ್ಸಿಗೆ ತಿಳಿಯಬೇಕಾದರೆ ಯಾವಾಗಲೂ ಅದೇ ಗುಂಗಿನಲ್ಲಿರಬೇಕಾಗುತ್ತಿತ್ತು. ಅಂತರ ಕಾಲೇಜ್ ಸ್ಪರ್ಧೆಯಲ್ಲಿ ವಿದ್ಯಾಧರ ಹಾಡಿದುದನ್ನು ಕೇಳಿದಾಗಿನಿಂದ ವಿದ್ಯಾ ತನ್ನ ಅಭ್ಯಾಸ ಜಾಸ್ತಿ ಮಾಡಿದ್ದಳು.

ಈಗ ವಿದ್ಯಾಳಿಗೆ ಸೀನಿಯರ್ ಗೆ ಕಷ್ಟವಾದ ಪಾಠಗಳ ರೆಕಾರ್ಡಿಂಗ್ ಗುರುಗಳೇ ಮಾಡಿಕೊಡುತ್ತಿದ್ದರು.ವಿದ್ಯಾ ಟೇಪ್ ರೆಕಾರ್ಡ್ ಹಾಕಿಕೊಂಡೇ ದಿನದ ಬಹುಪಾಲು ಕಳೆಯುತ್ತಿದ್ದಳು. ರಾಗಗಳ ಮನೋಧರ್ಮ ಮನಸ್ಸಿಗೆ ತಿಳಿಯಬೇಕಾದರೆ ಯಾವಾಗಲೂ ಅದೇ ಗುಂಗಿನಲ್ಲಿರಬೇಕಾಗುತ್ತಿತ್ತು. ಅಂತರ ಕಾಲೇಜ್ ಸ್ಪರ್ಧೆಯಲ್ಲಿ ವಿದ್ಯಾಧರ ಹಾಡಿದುದನ್ನು ಕೇಳಿದಾಗಿನಿಂದ ವಿದ್ಯಾ ತನ್ನ ಅಭ್ಯಾಸ ಜಾಸ್ತಿ ಮಾಡಿದ್ದಳು.

ವಿದ್ಯಾಳ ಸಂಗೀತ ತರಗತಿ ತುಂಬಾ ಚೆನ್ನಾಗಿ ನೆಡೆಯುತ್ತಿತ್ತು.ಅವಳ ಶ್ರದ್ಧೆ ಹಾಗೂ ಸಂಗೀತದ ಬಗೆಗಿನ ಅವಳ ಭಕ್ತಿ ಅವಳನ್ನು ದಿನೇ ದಿನೇ ಉತ್ತಮ ಸ್ಥಿತಿಗೆ ಒಯ್ಯುತ್ತಿತ್ತು. ಕ್ಲಾಸ್ ಗೆ ಬರುವ ಮಕ್ಕಳಿಗೆ ಬಹಳ ಪ್ರೀತಿಯಿಂದ ಪಾಠ ಹೇಳಿ ಕೊಡುತ್ತಿದ್ದಳು.ಆದರೆ ಕಲಿಕೆಯ ವಿಚಾರದಲ್ಲಿ ಅವಳು ಅವಳ ಗುರುಗಳಂತೆಯೇ ಕಟುವಾಗಿ ನೆಡೆದುಕೊಳ್ಳುತ್ತಿದ್ದಳು. ಚಿಕ್ಕ ಚಿಕ್ಕ ಮಕ್ಕಳಿಗೆ ಮನ ಮುಟ್ಟುವಂತೆ ಸಂಗೀತ ಪಾಠ ಮಾಡುವುದು ಬರು ಬರುತ್ತಾ ವಿದ್ಯಾಳಿಗೆ ಕರಗತವಾಯಿತು.

ವಿದ್ಯಾಳ ಗುರುಗಳು ಆಗಾಗ ಬಂದು ಕ್ಲಾಸ್ ಮಕ್ಕಳಿಗೆ ಹೆಚ್ಚಿನ ಮಾರ್ಗದರ್ಶನ ಮಾಡುತ್ತಿದ್ದರಿಂದ ವಿದ್ಯಾಳಿಗೆ ಧೈರ್ಯ. ಮಕ್ಕಳು ಅಲ್ಪ ಸ್ವಲ್ಪ ಹಾಡಲು ತಯಾರಾಗುತ್ತಿದ್ದಂತೆಯೇ ವಿದ್ಯಾಳ ಗುರುಗಳು ವಿದ್ಯಾಳಿಗೆ ತ್ಯಾಗರಾಜರ ಆರಾಧನಾ ಕಾರ್ಯಕ್ರಮವನ್ನು ಮಾಡುವಂತೆ ಹೇಳಿದರು.ಈ ಕಾರ್ಯಕ್ರಮದ ಮೂಲಕ ವಿದ್ಯಾಳ ಪ್ರತಿಭೆಯನ್ನು ಗುರುತಿಸುವುದು ಮತ್ತು ಅವಳ ಶಿಷ್ಯರಿಗೂ ಕೂಡಾ ವೇದಿಕೆ ಕಲ್ಪಿಸಿ ಕೊಡುವುದು ಮುಖ್ಯ ಉದ್ದೇಶವಾಗಿತ್ತು.ಗುರುಗಳು ಪ್ರತೀ ವರ್ಷ ಆರಾಧನೆಯನ್ನು ಭದ್ರಾವತಿಯಲ್ಲಿ ಮಾಡುತ್ತಿದ್ದರು. ಹಲವಾರು ವಿದ್ವಾಂಸರಿಗೆ ವೇದಿಕೆ ಕಾರ್ಯಕ್ರಮ ನೀಡಿ ಸನ್ಮಾನವನ್ನು ಮಾಡಿ ರಾಜ್ಯದ ವಿವಿಧ ಕಲಾವಿದರನ್ನು ಗುರುತಿಸುವ ಕಾರ್ಯ ಮಾಡುತ್ತಲೇ ಇದ್ದರು.ವಿದ್ಯಾ ಇದನ್ನೆಲ್ಲಾ ಗಮನಿಸುತ್ತಲೇ ಇದ್ದಳು.ಹಾಗಾಗಿ ಒಂದು ಕಾರ್ಯಕ್ರಮ ಮಾಡುವುದು ಎಷ್ಟು ಕಷ್ಟ ಎಂದು ಗುರುಗಳನ್ನು ಹತ್ತಿರದಿಂದ ನೋಡಿದ್ದ ವಿದ್ಯಾ ಅರಿತುಕೊಂಡಿದ್ದಳು.ಗುರುಗಳು ಯಾರ ಸಹಾಯವೂ ಇಲ್ಲದೆ ತಾವೊಬ್ಬರೇ ಓಡಾಡಿ ಕಾರ್ಯಕ್ರಮ ಮಾಡುತ್ತಿದ್ದರು. ಹತ್ತಾರು ಕಲಾವಿದರಿಗೆ ವೇದಿಕೆ ಕಲ್ಪಿಸಿ ಕೊಡುತ್ತಿದ್ದರು.ಅವರು ಸಂಗೀತ ಶಿಕ್ಷಕರಾಗಿದ್ದು ಸರ್ಕಾರಿ ಸೇವೆಯಲ್ಲಿದ್ದುದರಿಂದ ಇದೆಲ್ಲಾ ಸಾಧ್ಯವಾಗಿತ್ತು."ಕೆರೆಯ ನೀರನು ಕೆರೆಗೆ ಚೆಲ್ಲಿ"ಎಂದು ಯಾವಾಗಲೂ ಹೇಳುತ್ತಾ ಸಂಗೀತದಿಂದ ದುಡಿದ ಹಣದಲ್ಲಿ ಸ್ವಲ್ಪ ಭಾಗ ಇಂತಹಾ ಕಾರ್ಯಕ್ರಮ ಗಳಿಗೆ ವಿನಿಯೋಗಿಸುತ್ತಿದ್ದರು.

ಗುರುಗಳು ಯಾವಾಗಲೂ ವಿದ್ಯಾಳಿಗೆ ಸಂಗೀತ ಕಲಿಯುವ



ಪ್ರತಿಯೊಬ್ಬ ವಿದ್ಯಾರ್ಥಿಯು ತ್ಯಾಗರಾಜರ ಆರಾಧನೆಯನ್ನು ಮಾಡಲೇ ಬೇಕು ಎಂದು ಯಾವಾಗಲೂ ಹೇಳುತ್ತಿದ್ದರು.ಆದರೆ ಈ ರೀತಿಯ ಕಾರ್ಯಕ್ರಮ ವಿದ್ಯಾ ತನ್ನ ಊರಿನಲ್ಲಿ ಮಾಡಲು ಧೈರ್ಯ ಸಾಲದೇ ಸುಮ್ಮನಿದ್ದಳು.ಎಲ್ಲೋ ಮನದ ಮೂಲೆಯಲ್ಲಿ ತಾನೂ ಈ ರೀತಿಯ ಕಾರ್ಯಕ್ರಮ ಮಾಡುವುದರ ಮೂಲಕ ತ್ಯಾಗರಾಜ ಸ್ವಾಮಿಗಳ ಸೇವೆಯನ್ನು ಮಾಡಬೇಕು ಎಂಬ ಆಸೆ ಇತ್ತು.



ಜಂಬೆ.ಎಸ್.ವಿದ್ಯಾರಾಣಿ.

AJATHA SHATHRU KANNADA DAILY MORNING Editor, Printer, Publisher, & Owned by : PRADEEP KUMAR H.No. 2/77/1, Godi nilaya, Halli street, 1st ward,Mainahalli, Koppal-583238, Dist : Koppal- Karnataka Printed at : Goditechnologies, H.No. 2/77/1, Godi nilaya, Halli street, 1st ward,Mainahalli, Koppal-583238, Karnataka